ತಪ್ತಮುದ್ರಾಧಾರಣ

(ಅದರ ಮಹತ್ತ್ವ ಮತ್ತು ವಿಧಿವಿಧಾನಗಳ ಸಂಗ್ರಹ)



ಸಂಕಲನ ಮತ್ತು ಅನುವಾದ :

ವ್ಯಾಸನಕೆರೆ ಪ್ರಭಂಜನಾಚಾರ್ಯ, ಎಂ. ಎ.

ಪ್ರಕಾಶನ :

ಐತರೇಯ ಪ್ರಕಾಶನ ವ್ಯಾಸನಕೆರೆ

ಪಾಜಕ, ನಂ. 4, 14ನೇ ಮುಖ್ಯರಸ್ತೆ

ಬನಶಂಕರಿ ಮೊದಲ ಹಂತ, ಬೆಂಗಳೂರು-560 050

ತಪ್ತಮುದ್ರಾಧಾರಣ

(ಅದರ ಮಹತ್ತ್ವ ಮತ್ತು ವಿಧಿವಿಧಾನಗಳ ಸಂಗ್ರಹ)

ಸಂಕಲನ ಮತ್ತು ಅನುವಾದ :

ವ್ಯಾಸನಕೆರೆ ಪ್ರಭಂಜನಾಚಾರ್ಯ, ಎಂ. ಎ

ಪ್ರಕಾಶನ :

ಐತರೇಯ ಪ್ರಕಾಶನ ವ್ಯಾಸನಕೆರೆ

ಯಾಜಕ, ನಂ. 4, 14ನೇ ಮುಖ್ಯರಸ್ತೆ

ಬನಶಂಕರಿ ಮೊದಲ ಹಂತ, ಬೆಂಗಳೂರು-560 050

TAPTAMUDRADHARANA — Compiled by Prof. Vyasanakere Prabhanjanacharya, M. A. and published by Aitareya Prakashana, Vyasanakere, No. 6, 14th Main BSK I Stage; Bangalore-560 050.

First Edition : 1990

Price :

Printed at :
NAYAK PRINTERS,
8, Neelipothaiah Lane,
O. T. C. Road Cross, Cottonpet,
BANGALORE - 560 053.

ಮುನ್ನುಡಿ

ಮೋಕ್ಷವು ಪರಮಪುರುಷಾರ್ಥವಾಗಿದ್ದು, ಭಗವತ್ಪ್ರಸಾದವು ಅದಕ್ಕೆ ಪ್ರಧಾನ ಸಾಧನವಾಗಿದೆ ; ಭಗವಂತನ ಪರಮಪ್ರಸಾದಕ್ಕೆ ಪರಮ ಭಕ್ತಿಯೂ,ಅದಕ್ಕೆ ಭಗವದ ಪರೋಕ್ಷಜ್ಞಾನವೂ ಸಾಧನವಾಗಿವೆ. ಅಪರೋಕ್ಷಜ್ಞಾನಕ್ಕೆ ಸಾಧನವಾಗುವ ಕರ್ಮಯೋಗವು ದಾನ, ತೀರ್ಥ ಮೊದಲಾಗಿ ಅನೇಕ ತೆರನಾಗಿದ್ದು, ಅವುಗಳಲ್ಲಿ 'ತಪ್ತಮುದ್ರಾಧಾರಣೆ'ಯು ಅಪಾರ ಪ್ರಾಮುಖ್ಯ ಪಡೆದ ಒಂದು ಅಪೂರ್ವ ಸಾಧನ.

ವಿಷ್ಣುಭಕ್ತಿಯು ಸಕಲ ಸದ್ಗುಣಗಳಿಗೂ ಹೃದಯಸ್ಥಾನೀಯವಾಗಿದ್ದು ವೈಷ್ಣವರ ಅಸಾಧಾರಣ ಲಕ್ಷಣವೆನ್ನಿಸಿದೆ. ವೈಷ್ಣವತ್ವಕ್ಕೆ ದ್ಯೋತಕವಾದ ಅತ್ಯಂತ ಪ್ರಮುಖ ಬಾಹ್ಯಲಕ್ಷಣವೆಂಬುದು 'ತಪ್ತಮುದ್ರಾಧಾರಣೆ'ದ ಹಿರಿಮೆ. ವೈಷ್ಣವರಾದ ಸಕಲ ವರ್ಣದವರಿಗೂ ಕಡ್ಡಾಯವೆಂಬುದಾಗಿ ಇದನ್ನು ಶಾಸ್ತ್ರಗಳು ವಿಧಿಸಿವೆ. ಪ್ರತಿದಿನದ ಗೋಪೀಚಂದನದ ಊರ್ಧ್ವಪುಂಡ್ರಧಾರಣೆ, ಪಂಚಮುದ್ರಧಾರಣೆಯಂತೆ ಅತ್ಯಂತ ಮಹತ್ತ್ವಪೂರ್ಣವಾದ ಮತ್ತೊಂದು ಬಾಹ್ಯಸಂಸ್ಕಾರವಾಗಿ ಈ ತಪ್ತಮುದ್ರಾಧಾರಣೆಯು ವಿಹಿತವಾಗಿದೆ.

ವೈಷ್ಣವರಿಗೆ ವಿಹಿತವಾದ ಪಂಚಸಂಸ್ಕಾರಗಳಲ್ಲಿ 'ತಾಪ'ವೆಂಬ ಸಂಸ್ಕಾರವು ಈ 'ತಪ್ತಮುದ್ರಾಧಾರಣೆ'ಯೇ ಆಗಿದೆ. ಜಾತಕರ್ಮ, ಚೌಲ, ಉಪನಯನ, ಮಂತ್ರೋಪದೇಶ ಮೊದಲಾದ ಸಕಲ ಕಾರ್ಯಗಳಲ್ಲೂ ತಪ್ತಮುದ್ರಾಧಾರಣೆಗೆ ವಿಶಿಷ್ಟಸ್ಥಾನವಿದೆ. ಅನಿವಾರ್ಯವಲ್ಲದ ಹೊರತು ಇದಿಲ್ಲದೆ ಉಪನಯನಾದಿಗಳನ್ನು ಮಾಡುವಂತೆಯೇ ಇಲ್ಲ ಎಂಬುದು ಶಾಸ್ತ್ರಗಳ ಘೋಷಣೆ. ಪ್ರತಿವರ್ಷವೂ ಶಯನೈಕಾದಶೀ(ಆಷಾಢಶುಕ್ಲ ಏಕಾದಶೀ), ಶ್ರವಣದ್ವಾದಶೀ, ಉಪಾಕರ್ಮ ಮೊದಲಾದ ವಿಶೇಷ ಪರ್ವಕಾಲಗಳಲ್ಲಿ ತಪ್ತಮುದ್ರಾಧಾರಣೆಯು ವಿಹಿತವಾಗಿದೆ. ಇಂತಹ (ತಪ್ತ) ಸುದರ್ಶನ ಧಾರಣೆಯು-ಸುದರ್ಶನ (ನಿರ್ಮಲತತ್ತ್ವಜ್ಞಾನ) ಪ್ರಾಪ್ತಿಯ ಅಪೂರ್ವ ಸಾಧನ ಎಂಬುದರಲ್ಲಿ ಅಪಾರ ಔಚಿತ್ಯವೂ ಇದೆ. ಸಾಂಸಾರಿಕ ತಾಪತ್ರಯಗಳ ನಿವಾರಣೆಗೂ ಸಹ ತಪ್ತಮುದ್ರಾಧಾರಣೆಯು ಅವಶ್ಯ ಎಂಬುದು, 'ಉಷ್ಣಂ ಉಷ್ಣೇನ ಶೀತಲಂ' ಎಂಬ ಪ್ರಸಿದ್ಧ ಲೋಕನ್ಯಾಯದಿಂದಲೂ ಸಹ ಸಿದ್ಧವಾಗುತ್ತದೆ. ಸ-ಮುದ್ರರಷ್ಟೇ ಭವಸಮುದ್ರವನ್ನು ದಾಟಬಲ್ಲರು ; ಅ-ಮುದ್ರರಲ್ಲ ಎಂದು ಭಾವ.

ತಪ್ತಮುದ್ರಾಧಾರಣೆಯ ಮಹತ್ತ್ವವು ಋಗಾದಿವೇದಗಳಲ್ಲೂ, ಪದ್ಮ ಮೊದಲಾದ ಪುರಾಣಗಳಲ್ಲೂ, ಮಹಾಭಾರತಾದಿ ಇತಿಹಾಸಗಳಲ್ಲೂ ಬಂದಿದೆ. ಶ್ರೀಮದಾಚಾರ್ಯರು ತಪ್ತಮುದ್ರೆಗಳನ್ನು ತಮ್ಮ ಶಿಷ್ಯರಿಗೆ ಅನುಗ್ರಹಿಸಿದ ವಿವರ ಸುಮಧ್ವವಿಜಯದಲ್ಲಿ ಉಕ್ತವಾಗಿದೆ* :

ಸಜ್ಜನಾನ್ ಸಹ ಮಹಾದರೇಣ ಸ್ವಾನ್ ಪಾಪಿನಾಂ ಪ್ರಕೃತಿತೋಽಪ್ರಿಯಾಕೃತಿ ।
ದಾರುಣಾಘಗಣದಾರಣಂ ಸ್ಮ ಸ ಗ್ರಾಹಯತ್ಯಪಿ ಸುದರ್ಶನದ್ವಯಮ್ ॥* (9/39)

---

*ಅಯಂ ಭಾವಃ । ತತ್ತ್ವಜ್ಞಾನಯೋಗ್ಯಾನಾಂ ಜನಾನಾಂ ಭುಜಯೋಸ್ತಪ್ತಾಭ್ಯಾಂ ಶಂಖಚಕ್ರಾಭ್ಯಾಂ ಚಿಹ್ನಂ ಕೃತ್ವಾ ವಿಷ್ಣುದೀಕ್ಷಾಂ ಕಾರಯಿತ್ವಾ ತೇಭ್ಯಃ ಆದರೇಣ

ಅನಂತರವೂ ಕಾಲಕಾಲಕ್ಕೆ ಶ್ರೀವಾದಿರಾಜಸ್ವಾಮಿಗಳು (ಚಕ್ರಸ್ತುತಿ) ಶ್ರೀವಿಜಯೀಂದ್ರಸ್ವಾಮಿಗಳು (ತಪ್ತಚಕ್ರಮೀಮಾಂಸಾ) ಶ್ರೀ ಸತ್ಯಾಭಿನವತೀರ್ಥರು (ರಾಮಾಮೃತಮಹಾರ್ಣವ ಮತ್ತು ಅದರ ಟೀಕೆ) ಶ್ರೀ ಕುಂಡಲಗಿರಿಆಚಾರ್ಯರು (ತಪ್ತಮುದ್ರಾಧಾರಣಸಮರ್ಥನಂ) ಶ್ರೀಛಲಾರೀನರಸಿಂಹಾಚಾರ್ಯರು (ಸ್ಮೃತ್ಯರ್ಥ ಸಾಗರ) ಶ್ರೀಛಲಾರೀ ಶೇಷಾಚಾರ್ಯರು (ನಿರ್ಣಯರತ್ನ) ಶ್ರೀ ಕೃಷ್ಣಾಚಾರ್ಯರು (ಸ್ಮೃತಿಮುಕ್ತಾವಲಿ) ಮೊದಲಾದ ಮಹನೀಯರು ತಮ್ಮ ಗ್ರಂಥಗಳಲ್ಲಿ[1] ತಪ್ತಮುದ್ರಾ ಧಾರಣೆಯ ಮಹತ್ತ್ವವನ್ನು ಅನೇಕ ರೀತಿಯಲ್ಲಿ ಸಮರ್ಥಿಸಿದ್ದಾರೆ. 'ತಪ್ತಚಕ್ರ ಭೂಷಣ'ವೆಂಬಕೃತಿಯಲ್ಲಿ ಎಲ್ಲಾ ಪ್ರಾಚೀನ ಕೃತಿಗಳಲ್ಲಿನ ಪ್ರಮಾಣಗಳ ಸಂಕಲನವು ದೊರೆಯುತ್ತದೆ.[2]

ಶ್ರೀವಾದಿರಾಜಸ್ವಾಮಿಗಳ ಯುಕ್ತಿಮಲ್ಲಿಕೆಯ ಫಲಸೌರಭದಲ್ಲಿ ಒಟ್ಟು 72 ಶ್ಲೋಕಗಳಲ್ಲಿ ತಪ್ತಮುದ್ರಾಧಾರಣದ ಮಹತ್ತ್ವ ಮತ್ತು ವಿಧಿವಿಧಾನಗಳು ವಿವರವಾಗಿ ನಿರೂಪಿತವಾಗಿವೆ. ಶ್ರುತಿಗಳಲ್ಲಿ ಬಂದಿರುವ ತಪ್ತಮುದ್ರಾಧಾರಣೆಯ ಮಹತ್ತ್ವ ವನ್ನು ಉದ್ಗ್ರಂಥವೊಂದರಲ್ಲಿ ಪುರಾಣಗ್ರಂಥಗಳ ಆಧಾರದೊಂದಿಗೆ ವಿವರಿಸಿದ ಪ್ರಪ್ರಥಮ ಉದ್ಗ್ರಂಥಕಾರರು ಎಂಬುದು ಶ್ರೀವಾದಿರಾಜಸ್ವಾಮಿಗಳ ಹಿರಿಮೆ. ಶ್ರೀಸುರೋತ್ತಮತೀರ್ಥರ ಯುಕ್ತಿಮಲ್ಲಿಕಾವ್ಯಾಖ್ಯಾನದಲ್ಲೂ ಸಹ ಅನೇಕ ಉಪಯುಕ್ತ ವಿವರಗಳು ಸಂಕಲಿತವಾಗಿವೆ. ಯುಕ್ತಿಮಲ್ಲಿಕೆಯಲ್ಲಿ ಶ್ರೀವಾದಿರಾಜರು ತಮ್ಮ ಚಕ್ರಸ್ತುತಿಯನ್ನು ಸಹ ಉಲ್ಲೇಖಿಸಿರುವರು.[3] ತಪ್ತಚಕ್ರಮೀಮಾಂಸೆಯ ಬಗ್ಗೆ ಪ್ರಥಮಬಾರಿಗೆ ಪ್ರತ್ಯೇಕ ಗ್ರಂಥವೊಂದನ್ನೇ ರಚಿಸಿದವರು ಶ್ರೀವಿಜಯೀಂದ್ರಸ್ವಾಮಿಗಳು ಅನೇಕ ಆಕ್ಷೇಪಗಳಿಗೆ ಸಮರ್ಪಕ ಉತ್ತರಗಳನ್ನು ವಿವರವಾಗಿ ಈ ಗ್ರಂಥವು ಒದಗಿಸುತ್ತದೆ. ಶ್ರೀಸತ್ಯಾಭಿನವತೀರ್ಥರ ರಾಮಾಮೃತಮಹಾರ್ಣವದಲ್ಲಿ ಒಟ್ಟು 72 ಶ್ಲೋಕಗಳಲ್ಲಿ ತಪ್ತಚಕ್ರಮಾಹಾತ್ಮ್ಯ ಮತ್ತು ಅದರ ವಿಧಿವಿಧಾನಗಳು ನಿರೂಪಿತ

ಸಹ ಸ್ವಶಾಸ್ತ್ರಮುಪದಿದೇಶ ಇತಿ ಭಾವಃ । ಅನೇನ ತಪ್ತಚಕ್ರಶಂಖಧಾರಣರೂಪ ವಿಷ್ಣುದೀಕ್ಷಾರಹಿತಾನಾಂ ಸ್ವಶಾಸ್ತ್ರೋಪದೇಶೋ ನ ಕಾರ್ಯ ಇತಿ ಸೂಚ್ಯತೇ ॥

—ಛಲಾರೀಶೇಷಾಚಾರ್ಯರ ಸುಮಧ್ವವಿಜಯ ವ್ಯಾಖ್ಯಾನ

1 ಇವುಗಳಲ್ಲಿ ರಾಮಾಮೃತಮಹಾರ್ಣವ ಮತ್ತು ಅದರ ಟೀಕೆ ಹಾಗೂ ಕುಂಡಲಗಿರಿ ಆಚಾರ್ಯರ ಕೃತಿ ಇವು ಹೊಸಪೇಟೆಯ ಶ್ರೀಸತ್ಯಪ್ರಮೋದತೀರ್ಥ ಗ್ರಂಥಾಗಾರ (ಉತ್ತರಾದಿಮಠ)ದಲ್ಲೂ, ಶ್ರೀವಿಜಯೀಂದ್ರಸ್ವಾಮಿಗಳ ತಪ್ತಚಕ್ರಮೀಮಾಂಸೆಯು ನನ್ನ ಸಂಗ್ರಹ (ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ ವ್ಯಾಸನಕೆರೆ) ದಲ್ಲೂ ಉಪಲಬ್ಧವಿವೆ; ಇತರ ಕೃತಿಗಳು ಮುದ್ರಿತವಾಗಿವೆ.

2 ವಿಸ್ತರಸ್ತು ಶ್ರೀಮದ್ವಿಜಯೀಂದ್ರತೀರ್ಥ ಶ್ರೀಪಾದಕೃತ ಚಕ್ರಮೀಮಾಂಸಾಯಾ ದ್ರಷ್ಟವ್ಯಃ । ಏವಂ ಸ್ಮೃತಿಮುಕ್ತಾವಲ್ಯಾಂ ಪ್ರಾಚೀನ ಬಹುಗ್ರಂಥೇಷ್ವಪಿ ವಿಚಾರಃ ಕೃತ ಇತಿ ನಾಸ್ಮಾಭಿರತೀವ ಯತ್ನಃ ಕೃತಃ ॥

3 ಯುಕ್ತಿಮಲ್ಲಿಕಾ. (V/650)

ವಾಗಿವೆ ; ಅದಕ್ಕೆ ಅವರೇ ರಚಿಸಿರುವ ಟೀಕೆಯಂತೂ ತಪ್ತಮುದ್ರಾಧಾರಣದ ಬಗ್ಗೆ ಹೊಸಬೆಳಕನ್ನೇ ಚೆಲ್ಲುತ್ತದೆ.

ಈ ಎಲ್ಲಾ ಗ್ರಂಥಗಳಲ್ಲಿನ ತಪ್ತಮುದ್ರೆಗೆ ಸಂಬಂಧಿಸಿದ ಮುಖ್ಯ ವಿಚಾರಗಳನ್ನೆಲ್ಲ ಪ್ರಕೃತ ಕೃತಿಯಲ್ಲಿ ಸಂಗ್ರಹಿಸಿಕೊಡಲಾಗಿದೆ.

ತಪ್ತಮುದ್ರಾಧಾರಣೆಯು ಸಕಲವರ್ಣದವರಿಗೂ, ಸಕಲಆಶ್ರಮದವರಿಗೂ, ಸ್ತ್ರೀಯರಿಗೂ ಕಡ್ಡಾಯ ; ಜಾತಕರ್ಮಾದಿ ಸಕಲ ಸಂಸ್ಕಾರಗಳಲ್ಲೂ ತಪ್ತಮುದ್ರಾಧಾರಣೆಯು ವಿಹಿತ ; ಪ್ರತಿವರ್ಷದಲ್ಲೂ ಪ್ರಥಮೈಕಾದಶೀ ಮೊದಲಾದ ದಿನಗಳಲ್ಲಿ ಇದು ವಿಶೇಷ ಕರ್ತವ್ಯ ; ಪರಮಹಂಸರಾದ ಪೀಠಾಧೀಶರು ಮಾತ್ರವೇ ತಪ್ತಮುದ್ರೆಗಳನ್ನು ಕೊಡುವ ಅಧಿಕಾರ ಹೊಂದಿರುವರು; ಗೃಹಸ್ಥರಿಗೆ ಎಂದೂ ಇದನ್ನು ಕೊಡುವ ಅಧಿಕಾರವಿಲ್ಲ ; ಪೀಠಾಧೀಶರಲ್ಲಿ ಸ್ವತಃ ಶ್ರೀಮದಾಚಾರ್ಯರೇ ಸನ್ನಿಹಿತರಾಗಿದ್ದು ತಪ್ತಮುದ್ರೆಗಳನ್ನೀಯುವರು ಮೊದಲಾದವುಗಳು ಈಗ್ರಂಥಗಳಲ್ಲಿ ಬಂದಿರುವ ಮುಖ್ಯಾಂಶಗಳಾಗಿವೆ.

ಪ್ರತಿಯೊಬ್ಬ ವೈಷ್ಣವನೂ ತನಗೆ ಸಂಬಂಧಿಸಿದ ಪರಮಹಂಸ ಪೀಠಾಧೀಶರಿಂದಲೇ ತಪ್ತಮುದ್ರೆಗಳನ್ನು ಸ್ವೀಕರಿಸಬೇಕು ಎಂಬುದು ಸಹ ಶ್ರೀಸತ್ಯಾಭಿನವತೀರ್ಥ ಕೃತಿಯಲ್ಲಿನ ಪ್ರಮಾಣಗಳಿಂದ ತಿಳಿದು ಬರುತ್ತದೆ. ಬಿಡಿ ಸನ್ಯಾಸಿಗಳಿಗೂ ಸಹ ತಪ್ತಮುದ್ರಾಧಿಕಾರವನ್ನು ಶಾಸ್ತ್ರಗಳು ಕೊಟ್ಟಂತೆ ಕಾಣುವುದಿಲ್ಲ. ವೈಷ್ಣವ ಪರಂಪರೆಯಲ್ಲಿ ಸಂಪ್ರತಿಪನ್ನರಾದ ನಿಜವಾದ ಯಾವ ಗೃಹಸ್ಥ ವಿದ್ವಾಂಸರು ಸಹ ತಪ್ತಮುದ್ರೆಗಳನ್ನು ತಾವೇ ಹಾಕಿಕೊಂಡ ಅಥವಾ ಶಿಷ್ಯರಿಗೆ ತಾವೇ ಕೊಟ್ಟ ಉಲ್ಲೇಖ ಎಲ್ಲೂ ಕಂಡು ಬರುವುದಿಲ್ಲ; ಗೃಹಸ್ಥರಿಗೆ ತಪ್ತಮುದ್ರಾಧಿಕಾರವಿಲ್ಲವೆಂಬುದು ಇದರಿಂದಲೂ ಸಿದ್ಧವಾಗುತ್ತದೆ. ವಿಹಿತ ರೀತಿಯಲ್ಲಿ (ತನ್ನ ಮಠದ ಗುರುಗಳಿಂದ) ತಪ್ತಮುದ್ರೆಗಳನ್ನು ಸ್ವೀಕರಿಸದವನು ಎಂತಹ ವಿದ್ವಾಂಸನಾಗಿದ್ದರೂ, ವೇದಾದಿಶಾಸ್ತ್ರಗಳ ಪಾಠಪ್ರವಚನ ಮೊದಲಾದ ಸತ್ಕಾರ್ಯಗಳಿಗೆ ಅರ್ಹನಾಗುವುದಿಲ್ಲ ಎಂಬ ಶ್ರೀವಾದಿರಾಜಸ್ವಾಮಿಗಳ ಮಾತು ಇಲ್ಲಿ ಸ್ಮರಣೀಯವಾಗಿದೆ (ಯುಕ್ತಿಮಲ್ಲಿಕಾ (V/600)).

ಇಂದು ಮಾಧ್ವವೈಷ್ಣವರುಗಳನ್ನು ಗುರುತಿಸುವಲ್ಲಿ ಅವರು ಯಾವ ಮಠಕ್ಕೆ ಸೇರಿದವರು ಎಂದು ತಿಳಿದುಕೊಳ್ಳಲು ಇದು ಅತ್ಯಂತ ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಎಲ್ಲರೂ ಬಲ್ಲರು. ಸಾಮಾನ್ಯವಾಗಿ ಯಾವ ಮಠದ ಶ್ರೀಗಳಿಂದ ತಾವು ವೈಷ್ಣವ ದೀಕ್ಷೆಯನ್ನು ಸ್ವೀಕರಿಸಿದರೋ, ಅವರ ಮಠಕ್ಕೆ ತಾವು ಸೇರಿದವರು ಎಂದು ನಮ್ಮ ಹಿರಿಯರು ಒಪ್ಪಿಕೊಂಡರು;ಅವರ ಪರಂಪರೆಯು ಹಾಗೆಯೇ ಬೆಳೆಯಿತು. ಆದ್ದರಿಂದ ತಮ್ಮ ತಮ್ಮ ಮಠದ ಶ್ರೀಗಳಿಂದಲೇ ತಪ್ತಮುದ್ರೆಯನ್ನು ಸ್ವೀಕರಿಸಬೇಕು ಎಂಬ ವಿಚಾರವು ನ್ಯಾಯಪ್ರಾಪ್ತವೂ ಆಗಿದೆ. ವಿನಾಕಾರಣ ಮಠವನ್ನು ಬದಲಾಯಿಸುವ ಪ್ರವೃತ್ತಿಯು ತನ್ನ ಗುರುಪೀಠಕ್ಕೂ, ಮತ್ತು ಪೂರ್ವ

ಜರಿಗೂ ಮಾಡುವ ಅಪಚಾರವೇ ಆಗುತ್ತದೆ. ಒಂದು ಶಾಲೆಯ ವಿದ್ಯಾರ್ಥಿ ಮತ್ತೊಂದು ಶಾಲೆಯಲ್ಲಿ ಹಾಜರಿ ಹಾಕಲು ಸಾಧ್ಯವಿಲ್ಲವಷ್ಟೆ ?

ಇನ್ನು ಮಠಗಳ ಕಲ್ಪನೆಯು ಸಹ ಶ್ರೀಮದಾಚಾರ್ಯರೇ ಹಾಕಿಕೊಟ್ಟ ಸತ್ಪರಂಪರೆ ; ಇದಕ್ಕೆ ಶ್ರೀ ಹೃಷೀಕೇಶತೀರ್ಥರ ಸಂಪ್ರದಾಯ ಪದ್ಧತಿ, ಶ್ರೀವಾದಿರಾಜಸ್ವಾಮಿಗಳ ಸರಸಭಾರತೀವಿಲಾಸ (ಚಕ್ರೇ ಶಿಷ್ಯಾನ್ನವಾನ್ ನವ) ಮೊದಲಾದಗ್ರಂಥಗಳು ಆಧಾರವಾಗಿವೆ. ಒಂದಲ್ಲ ಒಂದು ರೀತಿಯಲ್ಲಿ ಶ್ರೀಮದಾಚಾರ್ಯರ ಮಠಕ್ಕೆ ಸಂಬಂಧಿಸಿದ ಯಾವನೂ ಅವುಗಳಿಗಾಗಲಿ, ಅವುಗಳ ಪೀಠಾಧೀಶರಿಗಾಗಲಿ ತೋರುವ ಅವಜ್ಞೆಯು ಇಡೀ ಗುರುಪೀಠಕ್ಕೆ ಮಾತ್ರವಲ್ಲದೆ, ಗುರುಶ್ರೇಷ್ಠರಾದ ಶ್ರೀಮದಾಚಾರ್ಯರಿಗೇ ಮಾಡುವ ದ್ರೋಹವಾಗುತ್ತದೆ ಎಂಬುದನ್ನು ಗಮನಿಸಬೇಕು. ವ್ಯಕ್ತಿಗಿಂತ ಸಂಸ್ಥೆಯು ದೊಡ್ಡದು ಎಂಬ ಮಾತೂ ಸಹ ಇದಕ್ಕೆ ಪೋಷಕವಾಗಿದೆ. ತಾನೇ ತಪ್ತಮುದ್ರೆಗಳನ್ನು ಹಾಕಿಕೊಳ್ಳುವ ಮೂಲಕ ಗುರುಪೀಠಗಳಿಗೆ ತೋರಿಸುವ ಅನಾದರವು ಐಹಿಕ ಪಾರತ್ರಿಕ ಅನರ್ಥಗಳಿಗೆ ಕಾರಣವಾಗುತ್ತದೆ.

ತಪ್ತಮುದ್ರಾಧಾರಣೆಯು ಅವಶ್ಯವಿಧಿಯಾಗಿರುವಂತೆ ಅದು ವಿಹಿತರೀತಿಯಲ್ಲಿ ಯೋಗ್ಯಪೀಠಾಧೀಶರಿಂದಲೇ ಆಗಬೇಕು ಎಂಬ ಅಂಶವು ಸಹ ಅಷ್ಟೇ ಮುಖ್ಯ ಎಂಬುದು ಇಷ್ಟೆಲ್ಲ ವಿಚಾರದಿಂದ ಸ್ಫುಟಪಡುತ್ತದೆ.

ಅನೇಕ ಆಸ್ತಿಕರ ಅಪೇಕ್ಷೆಯ ಮೇರೆಗೆ ಈ '**ತಪ್ತಮುದ್ರಾಧಾರಣ**' ಗ್ರಂಥವು ಸಿದ್ಧವಾಗಿದೆ. ಇಂತಹ ಸಮಗ್ರ ಸಂಗ್ರಹ ಈ ಮೊದಲು ಕನ್ನಡದಲ್ಲಿ ಪ್ರಕಟವಾದಂತೆ ಕಾಣುವುದಿಲ್ಲ. 'ಸದಾಚಾರವಿನೋದ' ಭಾಗ-೧ರಲ್ಲಿ ಈ ಬಗ್ಗೆ ಕೆಲವು ವಿವರಗಳನ್ನು ಈಗಾಗಲೇ ಸಂಗ್ರಹಿಸಿಕೊಡಲಾಗಿದ್ದರೂ, ಸಂಗ್ರಹವು ಸಮಗ್ರವಾಗಬೇಕೆಂಬ ದೃಷ್ಟಿಯಿಂದ ಇನ್ನೂ ಕೆಲವು ವಿವರಗಳನ್ನು ಇದರಲ್ಲಿ ಸೇರಿಸಲಾಗಿದೆ. ಪರಿಶಿಷ್ಟದಲ್ಲಿ ತಪ್ತಮುದ್ರಾಧಾರಣೆಗೆ ಆಧಾರವಾದ ಶ್ರುತ್ಯಾದಿಗಳನ್ನು, ಶ್ರೀವಾದಿರಾಜಸ್ವಾಮಿಗಳ ಸಹಸ್ರಾರಸ್ತುತಿ, ಚಕ್ರಸ್ತುತಿಗಳನ್ನೂ ಶ್ರೀಮದ್ಭಾಗವತ ನವಮಸ್ಕಂಧದಲ್ಲಿನ ಸುದರ್ಶನಸ್ತುತಿಯನ್ನೂ ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಈ ಕೃತಿಯು ವೈಷ್ಣವರಿಗೆ ಉಪಯುಕ್ತವಾದೀತೆಂದು ಆಶಿಸಲಾಗಿದೆ. ಇದನ್ನು ಪ್ರಕಟಿಸುತ್ತಿರುವ ವ್ಯಾಸಕೆರೆಯ ಐತರೇಯ ಪ್ರಕಾಶನಕ್ಕೂ, ಎಂದಿನಂತೆ ಈ ಕೃತಿಯನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿರುವ ನಾಯಕ್ ಪ್ರಿಂಟರ್ಸ್ ಅವರಿಗೂ, ಮುದ್ರಣ ಕಾರ್ಯದಲ್ಲಿ ಸಹಕರಿಸಿರುವ ಶ್ರೀ ಜಿ. ಶೇಷಗಿರಿರಾವ್, ಶ್ರೀ ಎಂ. ವಿ. ಕಲಘಟಗಿ ಮತ್ತು ಶ್ರೀ ಎಸ್. ಆರ್. ಪಾಂಡುರಂಗಿ ಅವರಿಗೂ ನನ್ನ ಕೃತಜ್ಞತೆಗಳು.

ವ್ಯಾಸನಕೆರೆ ಪ್ರಭಂಜನಾಚಾರ್ಯ
ಪಾಜಕ, ನಂ. 6, 14ನೇ ಮುಖ್ಯರಸ್ತೆ,
ಬನಶಂಕರಿ ಮೊದಲನೆ ಹಂತ, ಬೆಂಗಳೂರು

ಶಯನೈಕಾದಶೀ-ಪ್ರಬೋಧ (1990)
ಬೆಂಗಳೂರು.

ತಪ್ತಚಕ್ರಪ್ರಶಸ್ತಿಃ

— ೦ —

ಪೂರ್ವಂ ಹರೇಶ್ಚಕ್ರಮಭೂದ್ಧಿ ದುರ್ಗಾ ತಮಃಸ್ಥಿತಾ ಶ್ರೀರಿತಿ ಯಾಂ ವದಂತಿ ।
ಸತ್ತ್ವಾತ್ಮಿಕಾ ಶಂಖಮಥೋ ರಜಃಸ್ಥಾ ಭೂರ್ನಾಮಿಕಾ ಪದ್ಮಮಭೂದ್ಧರೇರ್ಹಿ ॥
ಗದಾ ತು ವಾಯುರ್ಬಲಸಂವಿದಾತ್ಮಾ ಶಾರ್ಙ್ಗಂ ಚ ವಿದ್ಯೇತಿ ರಮೈವ ಖಡ್ಗಃ ।
ದುರ್ಗಾತ್ಮಿಕಾ ಸೈವ ಚ ಚರ್ಮನಾಮ್ನೀ ಪಂಚಾತ್ಮಕೋ ಮಾರುತ ಏವ ಬಾಣಃ ॥

—ಶ್ರೀ ಮಧ್ವಾಚಾರ್ಯರು (ಮಹಾಭಾರತ ತಾತ್ಪರ್ಯನಿರ್ಣಯ 3/75–77)

ಸ ಹೋವಾಚ ಯಾಜ್ಞವಲ್ಕ್ಯಸ್ತಸ್ಮಾತ್
ಪುಮಾನಾತ್ಮಹಿತಾಯ ಹರಿಂ ಭಜೇತ್ ।
ಸುಶ್ಲೋಕಮೌಲೇರ್ವರ್ಮಾಣ್ಯಗ್ನಿನಾ ಸಂದಧತೇ ।

—ಶತಪಥಶ್ರುತಿಃ (ನಿರ್ಣಯಸಿಂಧು, 84)

ಕಃ ಪಶ್ಯೇತ್ ಕಃ ಸ್ಪೃಶೇದ್ಯಸ್ಯ ಚಕ್ರಂ ಶ್ರೀಃ ಕಿಲ ದುರ್ಜಯಾ ॥
ತದ್ಧಿ ಹರ್ಯಪ್ರಿಯಂ ದೇವಂ ದಾನವಂ ವಾಽನುಧಾವತಿ ।
ನಮ್ರಂ ರಕ್ಷತ್ಯನಮ್ರಂ ತು ದಿಧಕ್ಷತಿ ದಹತ್ಯಪಿ ॥
ಶಿರಶ್ಛಿನತ್ತಿ ಶಕ್ತಿಂ ಸ್ವಾಂ ವ್ಯನಕ್ತಿ ಕಿಲ ಲೀಲಯಾ ।
ಈದೃಕ್ ಚಕ್ರಸ್ವರೂಪಾಂ ತಾಂ ಭೀಷಯೇದ್ದೂಷಯೇಚ್ಚ ಕಃ ॥

—ಶ್ರೀವಾದಿರಾಜಶ್ರೀಪಾದರು (ಸರಸಭಾರತೀವಿಲಾಸ 3/26–28)

ಯೇ ಶಂಖಚಕ್ರೋಜ್ಜ್ವಲಬಾಹುಯುಗ್ಮಾಃ ಸ್ವಾಂಘ್ರಿಂ ಭಜಂತೇ ಭವಸಿಂಧುರೇಷಃ ।
ಕಟಿಪ್ರಮಾಣಸ್ತ್ವಿತಿ ವೇಂಕಟೇಶಃ ಸ್ಫುಟೀಕರೋತ್ಯಾತ್ಮಕರಾಂಬುಜಾತೈಃ ॥

ಫಾಲೇ ಯಲ್ಲಿಖಿತಂ ಧುನೋತಿ ವಿವಿಧಾಂ ರೇಖಾಂ ವಿಧಾತ್ರಾ ಕೃತಾಂ
ಯಲ್ಲೀಲಾತಿಲಕೀಕೃತಂ ವಿತನುತೇ ವಿದ್ವಲ್ಲಲಾಮಾಯಿತಾನ್ ।
ಊರ್ಧ್ವಂ ಯದ್ಧೃತಮುಚ್ಚಲೋಕಪದವೀಸೋಪಾನಮನ್ವೇತಿ ತ-
ದ್ಗೋಪೀಚಂದನಮಂಜಸಾ ವಿಜಯತೇ ತಾಪತ್ರಯಧ್ವಂಸನಮ್ ॥

—ಶ್ರೀವಾದಿರಾಜಶ್ರೀಪಾದರು 'ತೀರ್ಥಪ್ರಬಂಧ' (3/21, 1/97)

ಮಂದನಾದರು ಸರಿಯು ಗೋಪೀ-
ಚಂದನ ಶ್ರೀಮುದ್ರೆಗಳ ನಲಿ-
ವಿಂದ ಧರಿಸುತ ಶ್ರೀತುಲಸಿ ಪದುಮಾಕ್ಷಿಸರಗಳನು ।
ಕಂಧರದ ಮಧ್ಯದಲಿ ಧರಿಸಿ ಮು-
ಕುಂದ ಶ್ರೀಭೂರಮಣ ತ್ರಿಜಗ-
ದ್ವಂದ್ಯ ಸರ್ವಸ್ವಾಮಿ ಮಮ ಕುಲದೈವವೆನೆ ಪೊರೆವ ॥

—ಶ್ರೀಜಗನ್ನಾಥದಾಸರು (ಹರಿಕಥಾಮೃತಸಾರ 16/20)

— ೦ —

ವಿಷಯಾನುಕ್ರಮಣಿಕೆ

ತಪ್ತಮುದ್ರಾಧಾರಣ

— ० —

ತಪ್ತಮುದ್ರಾಧಾರಣದ ಅವಶ್ಯಕತೆ

ಸಂಸ್ಕಾರಾಣಾಂ ಚ ಸರ್ವೇಷಾಂ ಆದ್ಯಂ ಚಕ್ರಾದಿಧಾರಣಮ್
ತತ್ಕರ್ತವ್ಯಂ ತು ಸರ್ವೇಷಾಂ ವಿಧಿನಾ ವೈ ದ್ವಿಜನ್ಮನಾಮ್ ||

—ಹಾರೀತಸ್ಮೃತಿಃ

ಉಪವೀತಾದಿವದ್ಧಾರ್ಯಾಃ ಶಂಖಚಕ್ರಾದಿಲಾಂಛನಾಃ |
ಬ್ರಾಹ್ಮಣಸ್ಯ ವಿಶೇಷೇಣ ವೈಷ್ಣವಸ್ಯ ವಿಶೇಷತಃ ||

—ಶಂಖಸ್ಮೃತಿ (ವಾಯುಪುರಾಣ)

ಲಕ್ಷಣಂ ದ್ವಿವಿಧಂ ಪ್ರೋಕ್ತಂ ಬಾಹ್ಯಮಾಭ್ಯಂತರಂ ತಥಾ |
ತಪ್ತಚಕ್ರಾಂಕನಂ ಬಾಹ್ಯಮನ್ಯದ್ರಾಗಾದಿಹೀನತಾ ||

—ಪರಾಶರಸ್ಮೃತಿಃ

ಚಕ್ರಾದಿಧಾರಣಂ ಪುಂಸಾಂ ಪರ(ಹರಿ)ಸಂಬಂಧವೇದನಮ್ |
ಪತಿವ್ರತಾನಿಮಿತ್ತಂ ಹಿ ವಲಯಾದಿವಿಭೂಷಣಮ್ ||

ಕೂರ್ಮಪುರಾಣ (ರಾಮಾಮೃತಮಹಾರ್ಣವ, 94)

ಸಕಲಸಂಸ್ಕಾರಗಳಲ್ಲೂ ತಪ್ತಮುದ್ರಾಧಾರಣಕ್ಕೇ ಪ್ರಥಮ ಸ್ಥಾನ; ಸಕಲ ವರ್ಣದವರೂ, ಸಕಲ ಆಶ್ರಮದವರೂ, ತಪ್ಪದೆ ತಪ್ತಚಕ್ರಾಂಕನ ಮಾಡಿಸಿಕೊಳ್ಳಬೇಕು; ಬ್ರಾಹ್ಮಣನಿಗೆ ಯಜ್ಞೋಪವೀತಾದಿಗಳಷ್ಟೇ ಅವಶ್ಯವಾದುದು ತಪ್ತಮುದ್ರಾಧಾರಣ. ಬಾಹ್ಯ ಮತ್ತು ಆಂತರ ಎಂಬುದಾಗಿ ವೈಷ್ಣವರ ಲಕ್ಷಣವು ಎರಡು ವಿಧವಾಗಿದೆ; ಅದರಲ್ಲಿ ಮುಖ್ಯ ಬಾಹ್ಯ ಲಕ್ಷಣ-ತಪ್ತಮುದ್ರಾಧಾರಣೆ; ಮತ್ತು ಆಂತರಲಕ್ಷಣ ಕಾಮಕ್ರೋಧಾದಿಗಳ ಪರಿತ್ಯಾಗ; ಬಳೆ ಮೊದಲಾದವುಗಳನ್ನು ಸ್ತ್ರೀಯರು ಧರಿಸುವುದು ಅವರ ಪಾತಿವ್ರತ್ಯಕ್ಕೆ ದ್ಯೋತಕವಾಗಿರುವಂತೆ ತಪ್ತಮುದ್ರಾ-ಧಾರಣೆಯು ವೈಷ್ಣವತ್ವಕ್ಕೆ ದ್ಯೋತಕವಾಗಿದೆ.

ತಪ್ತಮುದ್ರಾಧಾರಣದ ಮಹತ್ತ್ವ

[1]ಪ್ರತಪ್ತಂ ಬಿಭೃಯಾಚ್ಚಕ್ರಂ ಶಂಖಂ ಚ ಭುಜಮೂಲಯೋಃ |
ಶ್ರೌತಸ್ಮಾರ್ತಾದಿಸಿದ್ಧ್ಯರ್ಥಂ ಮಂತ್ರಸಿದ್ಧ್ಯರ್ಥಮೇವ ಚ ||

—ಶ್ರೀವಾದಿರಾಜ ಶ್ರೀಪಾದರ ಯುಕ್ತಿಮಲ್ಲಿಕಾ V-600

---

1 ಪದ್ಮಪುರಾಣೇ ವಾಸಿಷ್ಠಸ್ಮೃತೌ —(ಯುಕ್ತಿಮಲ್ಲಿಕಾ ಟೀಕಾ)

ಎರಡು ಭುಜಗಳಲ್ಲೂ ತಪ್ತವಾದ ಚಕ್ರಶಂಖಗಳನ್ನು ಕ್ರಮವಾಗಿ ಧರಿಸಬೇಕು. ಇದು ಸಕಲಶ್ರುತಿ, ಸ್ಮೃತ್ಯುಕ್ತ ಕರ್ಮಗಳ ಅನುಷ್ಠಾನಕ್ಕೆ ಅರ್ಹತೆಯನ್ನು ತಂದು ಕೊಡುತ್ತದೆ; ಮಂತ್ರಗಳ ಸಿದ್ಧಿಗೂ ಸಾಧನವಾಗುತ್ತದೆ.

ಯೇ ಕೇಚಿದ್ಯತ್ರ ಪುರುಷಾಃ ವಿಷ್ಣುಚಕ್ರೇಣ ಲಾಂಛಿತಾಃ ।
ತೇಷಾಂ ದರ್ಶನಮಾತ್ರೇಣ ಮಹಾಪಾತಕನಾಶನಮ್ ॥
ರಾಕ್ಷಸಾಶ್ಚ ಪಿಶಾಚಾಶ್ಚ ಗಂಧರ್ವಾ ದೈತ್ಯದಾನವಾಃ ।
ಕೃಷ್ಣಾಯುಧಾಂಕಿತಂ ವಿಪ್ರಂ ದೃಷ್ಟ್ವಾ ನಶ್ಯಂತಿ ದೂರತಃ ।

—ವೃದ್ಧಮನುಃ

ಭುಜಗಳಲ್ಲಿ ಚಕ್ರಶಂಖಗಳ ಲಾಂಛನದಿಂದ ಕೂಡಿದ ಜನರ ದರ್ಶನಮಾತ್ರ ದಿಂದಲೇ ಮಹಾಪಾತಕಗಳು ನಾಶವಾಗುತ್ತವೆ. ರಾಕ್ಷಸರು, ಪಿಶಾಚಿಗಳು, ದೈತ್ಯ-ದಾನವರು ಮೊದಲಾದ ದುಷ್ಟಶಕ್ತಿಗಳೆಲ್ಲಾ ಅಂತಹವರನ್ನು ಕಾಣುತ್ತಲೇ ಭಯದಿಂದ ಬಹುದೂರಕ್ಕೆ ಪಲಾಯನಮಾಡುತ್ತವೆ.

[1]ಶ್ರುತಿಗಳಲ್ಲಿ ತಪ್ತಮುದ್ರಾಧಾರಣೆಯ ವಿಧಿ

ಯೇನ ದೇವಾ ಪವಿತ್ರೇಣ ಆತ್ಮಾನಂ ಪುನತೇ ಸದಾ ।
ತೇನ ಸಹಸ್ರಧಾರೇಣ ಪಾವಮಾನ್ಯಃ ಪುನಂತು ಮಾಮ್ ॥
ಪ್ರಾಜಾಪತ್ಯಂ ಪವಿತ್ರಂ ಶತೋದ್ಯಾಮಂ ಹಿರಣ್ಮಯಮ್ ।
ತೇನ ಬ್ರಹ್ಮವಿದೋ ವಯಂ ಪೂತಂ ಬ್ರಹ್ಮ ಪುನೀಮಹೇ ॥

—ಯುಕ್ತಿಮಲ್ಲಿಕಾ (v–577)

(ಪದ್ಮ ಪುರಾಣ ಉತ್ತರಖಂಡದಲ್ಲಿ ಉಮಾಮಹೇಶ್ವರ ಸಂವಾದದಲ್ಲಿ ನಿರ್ದಿಷ್ಟ ವಾಗಿರುವ ಈ ಶ್ರುತಿವಾಕ್ಯಗಳನ್ನು ಶ್ರೀವಾದಿರಾಜಸ್ವಾಮಿಗಳು ಯುಕ್ತಿಮಲ್ಲಿಕಾ ಗ್ರಂಥದಲ್ಲೂ (v 577), ಶ್ರೀಸತ್ಯಾಭಿನವತೀರ್ಥರು 'ರಾಮಾಮೃತಮಹಾರ್ಣವ ಗ್ರಂಥದಲ್ಲೂ ಉಲ್ಲೇಖಿಸಿರುವರು. ಇಂತಹ ಇನ್ನೂ ಅನೇಕ ಶ್ರುತಿ ವಾಕ್ಯಗಳನ್ನು, ಪುರಾಣ ವಾಕ್ಯಗಳನ್ನೂ ಯುಕ್ತಿಮಲ್ಲಿಕೆಯಲ್ಲೂ ಶ್ರೀವಿಜಯೀಂದ್ರಸ್ವಾಮಿಗಳ ತಪ್ತಚಕ್ರಮೀಮಾಂಸಾ ಕೃತಿಯಲ್ಲೂ, ಕೃಷ್ಣಾಚಾರ್ಯರ "ಸ್ಮೃತಿಮುಕ್ತಾವಲಿ" ಯಲ್ಲೂ ಕಾಣಬಹುದು. "ತಪ್ತಚಕ್ರಭೂಷಣ"ವೆಂಬ ಪ್ರಾಚೀನ ಕೃತಿಯಲ್ಲಿ ಇವೆಲ್ಲ ವುಗಳ ಸಂಗ್ರಹವೂ ಬಂದಿದೆ.)

---

1 ಸಂತಿ ಸ್ಮೃತೀತಿಹಾಸಾದ್ಯಾಃ ಪುರಾಣಾನಿ ಚ ಕೋಟಿಶಃ ।
ಸುದರ್ಶನಸ್ಯ ಮೀಮಾಂಸಾ ಕೃತಾ ಚಾಸ್ಮತ್ಪುರಾತನೈಃ ॥
—ಶ್ರೀವಾದಿರಾಜಸ್ವಾಮಿಗಳ 'ಚಕ್ರಮೀಮಾಂಸಾ' 51

ತಪ್ತಮುದ್ರಾಧಾರಣೆಯಾಗದಿದ್ದಲ್ಲಿ ಮಹಾಪಾಪ

[1]ಅತಶ್ಚಕ್ರಾಂಕಶೂನ್ಯಾನಾಂ ವೇದಾಭ್ಯಾಸೋ ವೃಥಾ ಭವೇತ್ ।
ಯದಾ ಚಕ್ರಾಂಕಶೂನ್ಯೋಕ್ತವೇದಸ್ಯಾಪ್ಯಪವಿತ್ರತಾ ॥
[2]ತದಾ ತೇಷಾಂ ತು ಮೂರ್ಖಾಣಾಂ ಹೀನಾದಪಿ ಚ ಹೀನತಾ ।
ಕಿಂ ವಾಚ್ಯಾ ತೇನ ಚಂಡಾಲಾದಧಮಂ ತಂ ಸ್ಮೃತಿರ್ಜಗೌ ॥

—ಯುಕ್ತಿಮಲ್ಲಿಕಾ V —599, 600

ಗುರುಗಳಿಂದ ಕಾಲಕಾಲಕ್ಕೆ ವಿಧ್ಯುಕ್ತರೀತಿಯಲ್ಲಿ ತಪ್ತಮುದ್ರಾಧಾರಣೆಯನ್ನು ಹೊಂದದವರ ವೇದಾದಿ ಶಾಸ್ತ್ರಾಭ್ಯಾಸವೆಲ್ಲಾ ವ್ಯರ್ಥವೆನ್ನಿಸುತ್ತದೆ; ಅಂತಹವರ ವೇದಾಭ್ಯಾಸವೇ ಅಪವಿತ್ರವೆಂದಮೇಲೆ, ಅವರು ಮೂರ್ಖರು, ಹೀನರಲ್ಲಿ ಹೀನರು ಎಂದು ಮತ್ತೆ ಹೇಳಬೇಕಾಗಿಲ್ಲ; ಅಂತಹವರನ್ನು ಚಂಡಾಲನಿಗಿಂತಲೂ ಅಧಮರು ಎಂದೇ ಸ್ಮೃತಿಯು ಕರೆದಿದೆ.

ಉಪವೀತಂ ಶಿಖಾಬಂಧಮೂರ್ಧ್ವಪುಂಡ್ರಂ ತಥೈವ ಚ ।
ಚಕ್ರಲಾಂಛನಹೀನಸ್ಯ ವಿಪ್ರಸ್ಯ ನಿಷ್ಫಲಂ ಭವೇತ್ ॥
ತಸ್ಮಾಚ್ಚಕ್ರಾದಿಸಂಸ್ಕಾರಾಃ ಕರ್ತವ್ಯಾ ಮುನಿಸತ್ತಮಾಃ ।

—ಪರಾಶರಸ್ಮೃತಿ

ವಿಧ್ಯುಕ್ತವಾಗಿ ತಪ್ತಮುದ್ರೆಗಳನ್ನು ಧರಿಸದವನ ಯಜ್ಞೋಪವೀತ, ಶಿಖಾಬಂಧನ, ಊರ್ಧ್ವಪುಂಡ್ರ ಮೊದಲಾದ ಎಲ್ಲ ಚಿಹ್ನೆಗಳೂ ವ್ಯರ್ಥವೆನ್ನಿಸುತ್ತವೆ.

ಅಧೃತ್ವಾ ವೈಷ್ಣವಂ ಚಕ್ರಂ ಯತ್ಕರ್ಮ ಕ್ರಿಯತೇ ಜನೈಃ ।
ತತ್ಸರ್ವಂ ರಾಕ್ಷಸೈರ್ನೀತಮಿಷ್ಟಾಪೂರ್ತಂ ದ್ವಿಜೋತ್ತಮಾಃ ॥

—ಅತ್ರಿಸ್ಮೃತಿಃ

ತಪ್ತಚಕ್ರವನ್ನು ಧರಿಸದೆ ಜನಗಳಿಂದ ಮಾಡಲ್ಪಡುವ ಸಕಲ ಸತ್ಕರ್ಮಗಳೂ ರಾಕ್ಷಸರ ಪಾಲಾಗುತ್ತವೆ.

ಕೃಷ್ಣಮುದ್ರಾಂಕಿತೋ ನೈವ ಲಲಾಟೇ ಪುಂಡ್ರವರ್ಜಿತಃ ।
ಯಶ್ಚ ವಿಪ್ರಃ ಸ ದೇವರ್ಷೇ ವಿಜ್ಞೇಯೋ ದಾನವಾಂಶಕಃ ।

—ಪದ್ಮಪುರಾಣ

---

1 ಚಕ್ರಾಂಕಾಭಾವೇ ಪಠಿತವೇದಾಪಾವಿತ್ರ್ಯಸ್ಯ ಶ್ರೌತತ್ವಾತ್ ।

—ಯುಕ್ತಿಮಲ್ಲಿಕಾವ್ಯಾಖ್ಯಾನ, 599

2 ತೇನ ಚಕ್ರಾಂಕಶೂನ್ಯಸ್ಯಾಧಮತ್ವೇ ಸ್ಮೃತಿಃ ।
ಅವೈಷ್ಣವಸ್ತು ಯೋ ವಿಪ್ರೋ ಚಂಡಾಲಾದಧಮಃ ಸ್ಮೃತಃ ॥

—ಯುಕ್ತಿಮಲ್ಲಿಕಾವ್ಯಾಖ್ಯಾನ (600)

ತಪ್ತಮುದ್ರಾಧಾರಣೆಯನ್ನು ಹೊಂದದ ವಿಪ್ರನು ದೈತ್ಯಾಂಶದವನೇ ಸರಿ.

ತಪ್ತೈವ ಚಕ್ರಹೀನಸ್ಯ ಪೂಜನಾದ್ವಂದನಾದಪಿ ।
ವೈಷ್ಣವೋ ನರಕಂ ಯಾತಿ ಯಾವತ್ಕಲ್ಪಶತತ್ರಯಮ್ ॥

—ವಸಿಷ್ಠಸಂಹಿತಾ

ಗುರುಗಳಿಂದ ವಿಧ್ಯುಕ್ತವಾಗಿ ತಪ್ತಮುದ್ರೆಯನ್ನು ಸ್ವೀಕರಿಸದವನಿಗೆ ನಮಸ್ಕರಿಸುವ ಜನರು ಸಹ ಮುನ್ನೂರು ಕಲ್ಪಗಳ ಕಾಲ ನರಕವನ್ನು ಹೊಂದುವರು.

ತಪ್ತಮುದ್ರಾಧಾರಣೆಯು ಸಕಲರಿಗೂ ವಿಹಿತ

ಶಂಖಂ ಚಕ್ರಂ ಸ್ಫುಟಂ ಕುರ್ಯಾತ್ಪ್ರತಪ್ತಂ ಬಾಹುಮೂಲಯೋಃ ।
ಸರ್ವಾಶ್ರಮೇಷು ವಸತಾಂ ಸ್ತ್ರೀಣಾಂ ಚ ಶ್ರುತಿಚೋದನಾತ್ ॥

—ರಾಮಾಮೃತಮಹಾರ್ಣವ 107

ಅಗ್ನಾವೇವ ಪ್ರತಪ್ತಂ ತು ಚಕ್ರಮಾದಾಯ ವೈಷ್ಣವಃ ।
ದಾಹಯೇತ್ ಸರ್ವವರ್ಣಾನಾಂ ಹರಿಸಾಲೋಕ್ಯಸಿದ್ಧಯೇ ॥

—ವ್ಯಾಸಸ್ಮೃತಿ

ಕಲತ್ರಾಪತ್ಯಭೃತ್ಯೇಷು ಪಶ್ವಾದಿಷು ವಿಮುಕ್ತಯೇ ।
ಪಶುಪುತ್ರಾದಿಕಂ ಸರ್ವಂ ಗೃಹೋಪಕರಣಾನಿ ಚ ।
ಅಂಕಯೇಚ್ಚಕ್ರಶಂಖಾಭ್ಯಾಂ ನಾಮ ಕುರ್ಯಾಚ್ಚ ವೈಷ್ಣವಮ್ ॥

—ಶಾಂಡಿಲ್ಯಸ್ಮೃತಿ

ಸಕಲವರ್ಣದವರಿಗೂ, ಸಕಲ ಆಶ್ರಮದವರಿಗೂ, ಸ್ತ್ರೀಯರಿಗೂ ಸಹ ತಪ್ತ ಚಕ್ರಾಂಕನವು ವಿಹಿತವಾಗಿದೆ. ಯಜಮಾನನು ಪತ್ನೀಪುತ್ರಮೊದಲಾದ ತನ್ನ ಕುಟುಂಬದ ಸಕಲರಿಗೂ ಚಕ್ರಾಂಕನ ಮಾಡಿಸಲೇಬೇಕು. ಗೃಹೋಪಕರಣಗಳಿಗೂ ಚಕ್ರಶಂಖಗಳ ಲಾಂಛನವನ್ನು ಹಾಕಬೇಕು. ವಿಧ್ಯುಕ್ತವಾಗಿ ತಪ್ತಮುದ್ರಾಧಾರಣ ವನ್ನು ಹೊಂದುವ ಸಕಲರಿಗೂ ಹರಿಸಾಲೋಕ್ಯವು ಲಭಿಸುತ್ತದೆ.

ತಪ್ತಮುದ್ರಾಧಾರಣೆಗೆ ವಿಹಿತ ಕಾಲ

ಚಕ್ರಸ್ಯ ಧಾರಣೇ ಕಾಲಂ ಬ್ರಾಹ್ಮಣಾನಾಂ ವಿದುರ್ಬುಧಾಃ ।
ಜಾತಕರ್ಮಣಿ ವಾ ಕುರ್ಯಾತ್ ಚೌಲೋಪನಯನೇಽಪಿ ವಾ ।
ಮಂತ್ರಾಧ್ಯಯನಕಾಲೇ ವಾ ಚಕ್ರಂ ಧಾರ್ಯಂ ವಿಧಾನತಃ ।

—ವಾಸಿಷ್ಠ ಸ್ಮೃತಿಃ

ಉದ್ವಾಹಸಮಯೇ ಸ್ತ್ರೀಣಾಂ ಪುಂಸಾಂ ಚೈವೋಪನಾಯನೇ ।
ಚಕ್ರಸ್ಯ ಧಾರಣಂ ಪ್ರೋಕ್ತಂ ಮಂತ್ರೈಃ ಪಂಚಾಯುಧಾನಿ ಚ ॥

—ವೃದ್ಧಮನುಃ

ಜಾತಕರ್ಮಣ್ಯಲಾಭೇ ತು ವಿಷ್ಣೋಶ್ಚಕ್ರಸ್ಯ ಧಾರಣಮ್ ।
ಚೌಲೋಪನಯನೇ ವಾಽಪಿ ತನ್ಮಂತ್ರಾಧ್ಯಯನೇಽಪಿ ವಾ ॥

—ವಾಸಿಷ್ಠಸ್ಮೃತಿಃ

ತಪ್ತಚಕ್ರಾಂಕನಕ್ಕೆ "ಜಾತಕರ್ಮ"ವೇ ಅತ್ಯಂತ ಮುಖ್ಯಕಾಲ. ಅನಂತರ ಚೌಲ, ಉಪನಯನಾದಿ ಸಂಸ್ಕಾರಗಳ ಸಮಯದಲ್ಲೂ, ಮಂತ್ರಾಧ್ಯಯನ ಸಮಯದಲ್ಲೂ ಅದು ಅವಶ್ಯ ಕರ್ತವ್ಯವಾಗಿದೆ; ಸ್ತ್ರೀಯರಿಗೆ ವಿವಾಹ ಸಮಯವು ಅತ್ಯಂತ ಸೂಕ್ತಕಾಲ.

ಪ್ರತಿವರ್ಷವೂ ಮುದ್ರಾಧಾರಣವು ವಿಹಿತ

*ಪ್ರತಿಸಂವತ್ಸರಂ ಕುರ್ಯಾದುಪಾಕರಣಮುತ್ತಮಮ್ ।
ಏವಂ ಪ್ರತ್ಯಾಬ್ದಿಕಂ ಕಾರ್ಯಮುಪವೀತಂ ಸುದರ್ಶನಮ್ ॥

—ಹಾರೀತಸ್ಮೃತಿಃ

ಪ್ರತಿವರ್ಷವೂ ಉಪಾಕರ್ಮದಂದು ತಪ್ತಮುದ್ರೆಗಳನ್ನು ವಿಧ್ಯುಕ್ತವಾಗಿ ತಪ್ಪದೆ ಧರಿಸಲೇಬೇಕು. (ಇದರಿಂದ ಜನ್ಮದಲ್ಲಿ ಎಂದಾದರೂ ಒಮ್ಮೆ ವಿಧ್ಯುಕ್ತವಾಗಿ ತಪ್ತಮುದ್ರೆ ಸ್ವೀಕರಿಸಿದ್ದರೆ ಸಾಕು ಎಂಬ ವಾದವೂ, ಒಮ್ಮೆ ಗುರುಗಳಿಂದ ಸ್ವೀಕರಿಸಿದ್ದರೆ, ಅನಂತರ ತಾವೇ ಸ್ವತಃ ತಪ್ತಮುದ್ರೆ ಹಾಕಿಕೊಳ್ಳಬಹುದು ಎಂಬುದು ಹಲವರ ವಾದವೂ ಶಾಸ್ತ್ರವಿರುದ್ಧ ಎಂದು ಸಿದ್ಧವಾಗುತ್ತವೆ).

ಅಂತ್ಯಕಾಲದಲ್ಲೂ ಮುದ್ರಾಧಾರಣೆಯು ಅವಶ್ಯ

ಯಸ್ಯಾಂತಕಾಲೇ ಗಾತ್ರಂ ತು ಲಾಂಛಿತಂ ಚಾಯುಧೈರ್ಹರೇಃ ।
ದೃಷ್ಟ್ವಾ ಶೀಘ್ರಂ ಪಲಾಯಂತೇ ಯಮೇನ ಸಹ ಕಿಂಕರಾಃ ॥

—ಬ್ರಹ್ಮಾಂಡಪುರಾಣ

ಅಂತ್ಯಕಾಲದಲ್ಲೂ ಮುದ್ರಾಧಾರಣೆ ಹೊಂದಿದವರಿಗೆ ಯಮದೂತರ ಭಯವೇ ಇರುವುದಿಲ್ಲ.

ದೇವತೆಗಳಿಗೂ ತಪ್ತಮುದ್ರಾಧಾರಣೆಯು ವಿಹಿತ

ದೇವಾಸ್ತು ತಪ್ತಚಕ್ರಾಂಕಯೋಗ್ಯೇ *ಶುಭದಿನೇ ಸದಾ ।
ತಪ್ತೇನ ತೇನ ಪುನತೇ ಮೃದಾ ತಲ್ಲಾಂಛನೈಃ ಸದಾ ॥

—ಯುಕ್ತಿಮಲ್ಲಿಕಾ, 583

---

*ಏತೇನ 'ಯದುಕ್ತಂ' ಅಶೇಷಕರ್ಮಶೇಷತಯಾಽಸ್ಯ ಸಕೃದೇವಾನುಷ್ಠಾನಂ ಯುಕ್ತಮ್। ಶೇಷತ್ವಂ ಚಾಂಕನರೂಪಕ್ರಿಯಾಸಂಬಂಧಾಚ್ಛುಚಿತ್ವದ್ವಾರೇತಿ ನ ಪೌನಃಪುನ್ಯೇನ ತಸ್ಯಾನುಷ್ಠಾನಮಿತಿ ಪರಾಸ್ತಮ್। ಕರ್ಮಶೇಷತ್ವೇ ಹ್ಯುಪಾಕರಣಾದಿವತ್ ಸ್ವಾತಂತ್ರ್ಯೇಣಾಪಿ ವಿಧಾನೇನ ಪ್ರತಿಸಂವತ್ಸರಂ ತದನುಷ್ಠಾನಸ್ಯಾವಶ್ಯಕತ್ವಾತ್॥ (ಸ್ಮೃತಿಮುಕ್ತಾವಲಿ, 55)

ತಪ್ತಚಕ್ರಾಂಕನಕ್ಕೆ ಯೋಗ್ಯವಾದ ಶ್ರವಣದ್ವಾದಶೀ, ಪ್ರಥಮೈಕಾದಶೀ *ಶುಭ ದಿನಗಳಲ್ಲಿ ದೇವತೆಗಳು ಸಹ ತಪ್ಪದೆ ತಪ್ತಮುದ್ರೆಗಳನ್ನು ಧರಿಸುವರು.

ಪ್ರಹ್ಲಾದೇನ ತಥಾ ಮುದ್ರಾ ಧೃತಾ ನಾರಾಯಣೀ ಕರೇ ।
ವಿಭೀಷಣೇನ ರುದ್ರೇಣ ಬ್ರಹ್ಮಣಾ ವಜ್ರಪಾಣಿನಾ ॥
ಮಾಂಧಾತ್ರಾ ಚಾಂಬರೀಷೇಣ ಮಾರ್ಕಂಡೇಯಾದಿಭಿರ್ದ್ವಿಜೈಃ ।
ಅಂಕಿತಂ ಶಂಖಚಕ್ರಾಭ್ಯಾಂ ತಪ್ತಾಗ್ನೌ ಬಾಹುಮೂಲಯೋಃ ॥

—ಸ್ಕಂದಪುರಾಣ

ಬ್ರಹ್ಮದೇವರು, ರುದ್ರದೇವರು, ಇಂದ್ರದೇವರು ಮೊದಲಾದ ಸಕಲ ದೇವತೆಗಳೂ, ಪ್ರಹ್ಲಾದ, ವಿಭೀಷಣ, ಮಾಂಧಾತಾ, ಅಂಬರೀಷ, ಮಾರ್ಕಂಡೇಯ ಮೊದಲಾದ ಸಕಲ ಭಾಗವತ ಶಿರೋಮಣಿಗಳೂ ಬಾಹುಮೂಲಗಳಲ್ಲಿ ತಪ್ತಚಕ್ರಾದಿ ಲಾಂಛನಗಳನ್ನು ಸದಾ ಧರಿಸಿರುವರು.

ತಪ್ತಮುದ್ರೆಗಳನ್ನು ಪರಮಹಂಸ ಗುರುಗಳಿಂದಲೇ ಸ್ವೀಕರಿಸಬೇಕು

ಪ್ರತಪ್ತಂ ಚಕ್ರಮಾದಾಯ ಮಂತ್ರೇಣೈವಾಂಕಯೇದ್ಗುರುಃ ।
ಶಂಖೇನೈವಾಂಕನಂ ಕುರ್ಯಾದ್ಬಾಹ್ವೋರ್ದಕ್ಷಿಣಸವ್ಯಯೋಃ ॥

—ಶಿವಾಮೃತಮಹಾರ್ಣವ, 91

'ಅಂಕನಂ ಕುರ್ಯಾತ್', 'ಅಂಕಯೇದ್ಗುರುಃ'—ಇತಿ ದ್ವಿರುಕ್ತಿಸ್ತು ಗುರುಣೈವಾಂಕಯೇನ್ನಾನ್ಯಃ ಇತ್ಯವಧಾರಣಾರ್ಥೇತಿ ॥

—ಶಿವಾಮೃತಮಹಾರ್ಣವ ಟೀಕಾ 91

ಸತಾಂ ಭುಜೇ ಧಾರಯತಿ ಮುನೀನಾಂ ಮಧ್ವರೂಪಧೃಕ್ ।
ಸ ಏವ ಧಾರಯೇದ್ವಾಯುರನ್ಯತ್ರ ಗುರುಷು ಸ್ಥಿತಃ ॥

—ಯುಕ್ತಿಮಲ್ಲಿಕಾ V 616

ಅನ್ಯತ್ರ ಮಧ್ವರೂಪಾದನ್ಯತ್ರ ಗುರುಷು ಮುದ್ರಾಧಾರಣಕರ್ತೃಷು ಪರಮಹಂಸೇಷು ಸ್ಥಿತಃ ಅಂತರ್ಯಾಮೀ ಸ್ಥಿತಃ ॥

—ಯುಕ್ತಿಮಲ್ಲಿಕಾಟೀಕಾ (ಭಾವವಿಲಾಸಿನೀ)

ಅರ್ಥ್ಯಮಾನಂ ತು ಮುನಿನಾ ತಪ್ತಚಕ್ರಸ್ಯ ಲಾಂಛನಮ್ ।
ಗುರೂಣಾಂ ಕರಕಂಜೇನ ಧಾರ್ಯಂ ಚಕ್ರಂ ತದೇವ ಹಿ ॥

—ಯುಕ್ತಿಮಲ್ಲಿಕಾ V 585

ಗುರುಕರಪಂಕಜೇನ ಕ್ರಿಯಮಾಣತಪ್ತಸುದರ್ಶನಧಾರಣಸ್ಯೈವೋಚಿತಂ...(ವ್ಯಾ.)

---

*ಶುಭದಿನೇ—ಶ್ರವಣದ್ವಾದಶೀ ಪ್ರಥಮೈಕಾದಶೀ ದಿನೇ ।

—ಯುಕ್ತಿಮಲ್ಲಿಕಾವ್ಯಾಖ್ಯಾನ 583

ತಸ್ಮಾತ್ತು ವಿಧಿನಾ ಬ್ರಹ್ಮನ್ ಗೃಹ್ಣೀಯೊತ್ಸದ್ಗುರೋರಪಿ ।
ಯತೀನಾಂ ಯತಯಃ ಪ್ರೋಕ್ತಾಃ ಗುರವೋಽನ್ಯೇ ನಹಿ ಕ್ವಚಿತ್ ॥

—ರಾಮಾಮೃತಮಹಾರ್ಣವ

ಯತೀನಾಂ ಯತಯಃ-ಯತಿಶ್ರೇಷ್ಠಾಃ-ತಪ್ತಮುದ್ರಾಂಕನಾಧಿಕೃತಾ ಯತೀಶ್ವರಾಃ ಸ್ವಸದ್ಗುರವಃ ॥

—ರಾಮಾಮೃತಮಹಾರ್ಣವ ಟೀಕಾ

ಪ್ರತಪ್ತಂ ವಿಧಿನಾ ವಹ್ನೌ ಸಹಸ್ರಾರಂ ಸುವರ್ಣಕಮ್ ।
ಪ್ರಣತಾಯ ಪ್ರಶಿಷ್ಯಾಯ ಹಂಸೋ ಗುರುರಥಾಂಕಯೇತ್ ॥

—ಬ್ರಹ್ಮಾಂಡಪುರಾಣ (ಸ್ಮೃತಿಮುಕ್ತಾವಲಿ)

ಶಾಸ್ತ್ರೋಕ್ತರೀತಿಯಲ್ಲಿ ಹೋಮಾಗ್ನಿಯಲ್ಲಿ ಚೆನ್ನಾಗಿ ಕಾಯಿಸಿದ ಚಕ್ರಶಂಖ ಗಳನ್ನು ತಪ್ತಮುದ್ರಾಧಾರಣೆಗೆ ಅರ್ಹರಾಡ ಪರಮಹಂಸ ಯತಿಶ್ರೇಷ್ಠರು ಯೋಗ್ಯ ಶಿಷ್ಯರಿಗೆ ಧಾರಣಮಾಡಿಸಬೇಕು. ಪರಮಹಂಸರಾದ ಸ್ವಗುರುಗಳಿಗೆ ಮಾತ್ರವೇ ತಪ್ತಮುದ್ರೆಗಳನ್ನು ಧಾರಣ ಮಾಡಿಸುವ ಅಧಿಕಾರ ಉಂಟು ; ಇತರರಿಗೆ ಈ ಅಧಿಕಾರ ಎಂದೂ ಇರುವುದಿಲ್ಲ.

ಗೃಹಸ್ಥರು ಮೊದಲಾದವರಿಗೆ ತಪ್ತಮುದ್ರಾಧಿಕಾರವಿಲ್ಲ :
(ಸ್ವತಃ ಮುದ್ರಾಧಾರಣೆ ನರಕಹೇತು)

ಲೋಭಾದ್ಯುಪಾಧಿನಾ ವಾಪಿ ಯಸ್ಮಾತ್ಕಸ್ಮಾಚ್ಚ ಪೂರುಷಾತ್ ।
ಸ್ವಯಂ ವಾಪಿ ದಹೇದ್ಗಾತ್ರಂ ಚಕ್ರಶಂಖಾದಿಕೈರಪಿ ॥
ಸೋಽಪಿ ವ್ರಜೇತ ನಿರಯಂ ಸಾಕಂ ಸ್ವಗುರುಣಾ ಚಿರಮ್ ॥

—ರಾಮಾಮೃತಮಹಾರ್ಣವ, 99

ಲೋಭ ಮೊದಲಾದ ಕಾರಣಗಳಿಂದಾಗಿ ಪರಮಹಂಸರಲ್ಲದ ಅನಧಿಕಾರಿಗಳಿಂದ ಚಕ್ರಶಂಖಗಳಿಂದ ಶರೀರವನ್ನು ಸುಟ್ಟುಕೊಳ್ಳುವುದನ್ನಾಗಲೀ, (ಪರಮಹಂಸನಲ್ಲ ದವನು) ತಾನೇ ಸ್ವತಃ ಮುದ್ರಾಧಾರಣ ಮಾಡಿಕೊಳ್ಳುವುದಾಗಲೀ ಅತ್ಯಂತ ನಿಷಿದ್ಧ ವಾದುದು ; ಆ ರೀತಿ ಮುದ್ರೆ ಹಾಕುವವರು ಮತ್ತು ಹಾಕಿಸಿಕೊಳ್ಳುವವರು ಇಬ್ಬರೂ ಚಿರಕಾಲ ನರಕದಲ್ಲಿ ನೆಲೆಸುವರು*.

ವಿಧ್ಯುಕ್ತವಾಗಿಯೇ ಮುದ್ರೆಗಳನ್ನು ಧರಿಸಬೇಕು

ಭವೇಯುಃ ಸರ್ವದಾ ತಸ್ಮಾಚ್ಚಕ್ರಶಂಖಗದಾಂಬುಜೈಃ ।
ಲೋಹೈರನಲಸಂತಪ್ತೈಸ್ತತ್ತನ್ಮಂತ್ರಾಧಿದೈವತೈಃ ॥
ಪೂಜಿತೈರರ್ಘ್ಯಗಂಧಾದ್ಯೈರಂಕಿತವ್ಯಾ ಕ್ಷಣೇನ ತು ॥

—ಪರಾಶರಸ್ಮೃತಿಃ

*ಹೀಗೆ ತಾವೇ ತಪ್ತಮುದ್ರೆ ಹಾಕಿಕೊಳ್ಳುವವರು 'ಪೌಂಡ್ರಕ ವಾಸುದೇವ' ನಂತಹವರು ಎಂದು ಭಾವ.

ಮಂತ್ರಪೂರ್ವಕವಾಗಿ ಆಯಾ ಅಭಿಮಾನಿದೇವತೆಗಳನ್ನು ಅರ್ಘ್ಯಾದಿಗಳಿಂದ ಪೂಜಿಸಿ, ಚೆನ್ನಾಗಿ ಕಾಯಿಸಿದ ಚಕ್ರಶಂಖಾದಿಗಳನ್ನು ಗುರುಗಳ ಕೈಯಿಂದ ಧಾರಣ ಮಾಡಿಸಿಕೊಳ್ಳಬೇಕು.

ಮುದ್ರಾಂಕನವಿಧಿ

ಪ್ರಾಙ್ಮುಖಂ ತು ಸಮಾಸೀನಂ ಶಿಷ್ಯಮೇಕಾಗ್ರಮಾನಸಃ ।
ಪ್ರತಪೇಚ್ಛಂಖಚಕ್ರಾದಿಹೇತಿಭಿರ್ಮಂತ್ರಮುಚ್ಚರನ್ ॥

—ಹಾರೀತಸ್ಮೃತಿಃ

ಗುರುವು, ಶಿಷ್ಯನನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಿ, ಏಕಾಗ್ರಚಿತ್ತದಿಂದ ತಪ್ತಚಕ್ರಾದಿಗಳಿಂದ ಮಂತ್ರ ಪೂರ್ವಕವಾಗಿ ಅಂಕನ ಮಾಡಬೇಕು.

ತಪ್ತಮುದ್ರಾಧಾರಣಮಂತ್ರಗಳು

ಚಕ್ರಧಾರಣಮಂತ್ರಃ

ಸುದರ್ಶನ ಮಹಾಜ್ವಾಲ ಕೋಟಿಸೂರ್ಯಸಮಪ್ರಭ ।
ಅಜ್ಞಾನಾಂಧಸ್ಯ ಮೇ ನಿತ್ಯಂ ವಿಷ್ಣೋರ್ಮಾರ್ಗಂ ಪ್ರದರ್ಶಯ ॥

ಶಂಖಧಾರಣಮಂತ್ರಃ

ಪಾಂಚಜನ್ಯ ನಿಜಧ್ವಾನಧ್ವಸ್ತಪಾತಕಸಂಚಯ ।
ಪಾಹಿ ಮಾಂ ನರಕಾದ್ ಘೋರಾತ್ ಸಂಸಾರಾರ್ಣವತಾರಣ ॥

ಚಿನ್ನದ ಶಂಖಚಕ್ರಗಳು ವಿಹಿತ[1]

[2]ಸುದರ್ಶನಂ ಪಾಂಚಜನ್ಯಂ ಸೌವರ್ಣೇನ ಪ್ರಕಾರಯೇತ್ ।

—ರಾಮಾಮೃತಮಹಾರ್ಣವ, 89 (ಪದ್ಮಪುರಾಣ ಉತ್ತರಖಂಡ)

ಸುದರ್ಶನ ಮತ್ತು ಪಾಂಚಜನ್ಯಮುದ್ರೆಗಳನ್ನು ಉತ್ತಮಚಿನ್ನದಿಂದ ಶಾಸ್ತ್ರೋಕ್ತ ಕ್ರಮದಲ್ಲಿ ಮಾಡಿಸಿರಬೇಕು.

ಚಕ್ರಾದಿಗಳ ಅಭಿಮಾನಿದೇವತೆಗಳು

ದುರ್ಗಾ ಚಕ್ರಾಧಿದೇವೀ ಸ್ಯಾತ್ ಶ್ರೀಶ್ಚ ಶಂಖಾಧಿದೇವತಾ ।
ವಾಯುರ್ಗದಾಧಿದೇವಃ ಸ್ಯಾದ್ಭೂಮಿಃ ಪದ್ಮಾಭಿಮಾನಿನೀ ॥

—ಶ್ರೀ ಟೀಕಾಕೃತ್ಪಾದರ 'ಪದ್ಯಮಾಲಾ'[1]

[2]ಚಕ್ರಕ್ಕೆ ದುರ್ಗಾದೇವಿಯೂ, ಶಂಖಕ್ಕೆ ಶ್ರೀದೇವಿಯೂ, ಪದ್ಮಕ್ಕೆ ಭೂದೇವಿಯೂ, ಗದೆಗೆ ವಾಯುದೇವರೂ ಅಭಿಮಾನಿದೇವತೆಗಳಾಗಿರುವರು. (ಆದ್ದರಿಂದ ಚಕ್ರಾದಿಗಳ

---

1 ಚಕ್ರಂ ಸುವರ್ಣತಃ ಕುರ್ಯಾತ್ ಶಂಖಂ ತು ರಜತೇನ ಚ ॥

- ಯುಕ್ತಿಮಲ್ಲಿಕಾ 4/608

2 ವಿವರಗಳಿಗೆ ನಮ್ಮ 'ಪದ್ಯಮಾಲಾ' ಅನುವಾದ (ಐತರೇಯ ಪ್ರಕಾಶನ) ನೋಡಿ.

ಧಾರಣೆಯಿಂದ ಅಜ್ಞಾನಮಿಥ್ಯಾಜ್ಞಾನಗಳ ಪರಿಹಾರ, ತತ್ತ್ವಜ್ಞಾನಪ್ರಾಪ್ತಿ ಮೊದಲಾದ ಫಲಗಳು ಲಭಿಸುವವು ಎಂದು ಭಾವ).

ತಂದೆ ಪುರೋಹಿತ ಮೊದಲಾದವರಿಗೆ ಮುದ್ರಾಧಿಕಾರವಿಲ್ಲ

ಏತೇನ ಪಿತುಃ ಪುರೋಹಿತಸ್ಯ ಚ ತಪ್ತಮುದ್ರಾನಧಿಕಾರಾಭಾವಾತ್ ದ್ವಿಜೋತ್ತಮಃ ವಹ್ನಿತಪ್ತಂ ಸುದರ್ಶನಂ ಧಾರಯಿತ್ವಾ ಉಪನೀಯ ಪಶ್ಚಾತ್ ಕರ್ಮಸು ಯೋಜಯೇದಿತಿ ಕಥಮಯುಕ್ತಮಿತಿ ದೂಷಣಂ ಪರಿಹೃತಮ್ । ಪಿತಾ ಪುರೋಹಿತೋ ವಾ ಸ್ವಹಸ್ತೇನ ವಹ್ನಿತಪ್ತಂ ಸುದರ್ಶನಂ ಧಾರಯಿತ್ವಾ ಉಪನಯನಂ ಕುರ್ಯಾದಿತ್ಯರ್ಥೋಽತ್ರ ನೋಚ್ಯತೇ । ಕಿಂತು ತಪ್ತಮುದ್ರಾದಾನಾಧಿಕೃತಾ ಗುರವಃ ಇತ್ಯಾದೇರಧ್ಯಾಹಾರಂ ಸ್ವೀಕೃತ್ಯ ತಪ್ತಮುದ್ರಾದಾನಾಧಿಕೃತಗುರವಃ ಸಮೀಪೇ ವರ್ತಂತೇ ಚೇತ್, ತದ್ಧಸ್ತೇನ ವಹ್ನಿತಪ್ತಂ ಸುದರ್ಶನಂ ಧಾರಯಿತ್ವಾ ಉಪನಯನಂ ಕುರ್ಯಾನ್ನೋ ಚೇತ್, ತಪ್ತಮುದ್ರಾಧಾರಣಾಭಾವೇಽಪಿ ಉಪನಯನಂ ಕುರ್ಯಾತ್ ಇತ್ಯರ್ಥ ಉಚ್ಯತೇ ಇತ್ಯಂಗೀಕಾರಾತ್ ।

—ಶ್ರೀ ಸತ್ಯಾಭಿನವತೀರ್ಥರು, ರಾಮಾಮೃತಮಹಾರ್ಣವಟೀಕಾ, 94.

ಸುದರ್ಶನಂ ಧಾರಯಿತ್ವಾ ವಹ್ನಿತಪ್ತಂ ದ್ವಿಜೋತ್ತಮಃ ।
ಉಪನೀಯ ವಿಧಾನೇನ ಪಶ್ಚಾತ್ ಕರ್ಮಸು ಯೋಜಯೇತ್॥ (ರಾ.ಮ.—94)

—ಈ ವಾಕ್ಯದಿಂದ 'ಬ್ರಾಹ್ಮಣರಿಂದ ತಪ್ತಮುದ್ರೆಗಳನ್ನು ಮಾಡಿಸಿ' ಎಂಬುದಕ್ಕೆ ತಪ್ತಮುದ್ರಾಧಾರಣ ಮಾಡಲು ಅಧಿಕಾರಿಗಳಾದ ಪರಮಹಂಸ ಸ್ವಗುರುಗಳಿಂದ ಮಾಡಿಸಿಯೇ ಎಂದು ಅರ್ಥ ಎಂಬುದು ಸಿದ್ಧವಾಗುತ್ತದೆ.

ಮುದ್ರೆಗಳ ಸಂಖ್ಯೆ[2]

ನನ್ವೇಷು ವಚನೇಷು ಕುತ್ರಚಿತ್ ಏಕಚಕ್ರಸ್ಯ ಧಾರಣಮ್, ಕುತ್ರಚಿತ್ ಶಂಖಚಕ್ರಯೋಃ, ಕುತ್ರಚಿತ್ ಪಂಚಾಯುಧಾನಾಂ ಚೇತಿ, ಅತೋ ವಿರೋಧಃ । ಉಚ್ಯತೇ । ಅತ್ಯಶಕ್ತಸ್ಯ ಏಕಚಕ್ರಧಾರಣಂ, ಶಕ್ತಸ್ಯ ತು ಶಂಖಚಕ್ರಯೋರ್ದ್ವಯೋಃ, ಅತಿಶಕ್ತಸ್ಯ ತು ಪಂಚಾನಾಂ ಧಾರಣಮಿತಿ ವ್ಯವಸ್ಥೋಪಪತ್ತೇರವಿರೋಧಃ ॥ ತಪ್ತಚಕ್ರಭೂಷಣ, 12

ಅಶಕ್ತರು ಚಕ್ರ ಒಂದನ್ನಾದರೂ ಧರಿಸಬೇಕು; ಶಕ್ತರು ಚಕ್ರಶಂಖ ಎರಡನ್ನೂ ಧರಿಸಬೇಕು ; ಅತ್ಯಂತ ಶಕ್ತರು ಚಕ್ರಾದಿ ಪಂಚಮುದ್ರೆಗಳನ್ನೂ ಧರಿಸಬೇಕು (ಐದು

---

1 ದಕ್ಷಿಣೇ ತು ಭುಜೇ ವಿಪ್ರೋ ಬಿಭೃಯಾದ್ವೈ ಸುದರ್ಶನಂ ।
ಸವ್ಯೇ ತು ಶಂಖಂ ಬಿಭೃಯಾದಿತಿ ಬ್ರಹ್ಮವಿದೋ ವಿದುಃ ॥— ಮಹೋಪನಿಷತ್
ಬಲಭುಜದಲ್ಲಿ ಸುದರ್ಶನವನ್ನೂ, ಎಡಭುಜದಲ್ಲಿ ಶಂಖವನ್ನೂ ಧರಿಸಬೇಕು.

2 ಮುದ್ರಾಧಾರಣಕಾಲಃ :
ಶಯನ್ಯಾಂ ಬೋಧಿನ್ಯಾಂ ಚೈವ ಚಕ್ರತೀರ್ಥೇ ತಥೈವ ಚ।
ಶಂಖಚಕ್ರವಿಧಾನೇನ ವಹ್ನಿಪೂತೋ ಭವೇನ್ನರಃ ॥ —ಭವಿಷ್ಯತ್ಪುರಾಣ
(ಆಷಾಢಶುಕ್ಲ) ಏಕಾದಶ್ಯಾಂ ತು ತಪ್ತಮುದ್ರಾಧಾರಣಮ್–ಸ್ಮೃತ್ಯರ್ಥಸಾಗರ

ಮುದ್ರೆಗಳನ್ನು ಧರಿಸುವ ಪದ್ಧತಿಯು ಚಕ್ರಾದಿ ಪಂಚಮುದ್ರೆಗಳ ಧಾರಣವಿಧಿಗೆ ಸ್ಮಾರಕ ಎಂದೂ ಸಹ ಇದರಿಂದ ತಿಳಿಯುತ್ತದೆ1).

ತಪ್ತಮುದ್ರಾಧಾರಣ ವಿಧಿ

ಪಶ್ಚಾದಗ್ನೌ ವಿನಿಕ್ಷಿಪ್ಯ ಚಕ್ರಾದ್ಯಾಯುಧಪಂಚಕಂ ।
ಪೂಜಯಿತ್ವಾ ಸಹಸ್ರಾರಂ ಧ್ಯಾಯೇತ್ತದ್ವಹ್ನಿಮಂಡಲೇ ॥
ಷಡಕ್ಷರೇಣ ಜುಹುಯಾದಾಜ್ಯಂ ವಿಂಶತಿಸಂಖ್ಯಯಾ ।
ಸರ್ವೈಶ್ಚ ಹೇತಿಮಂತ್ರೈಸ್ತು ಏಕೈಕಾಜ್ಯಾಹುತೀಃ ಕ್ರಮಾತ್ ॥
ತತಃ ಪ್ರದಕ್ಷಿಣಂ ಕೃತ್ವಾ ಸಶಿಷ್ಯೋ ವಹ್ನಿಮಾತ್ಮವಾನ್ ।
ನಮಸ್ಕೃತ್ಯ ತತೋ ವಿಷ್ಣುಂ ಜಪ್ತ್ವಾ ಮಂತ್ರವರಂ ಶುಭಂ ॥
ಪ್ರಾಂಙ್ಮುಖಂ ತು ಸಮಾಸೀನಂ ಶಿಷ್ಯಮೇಕಾಗ್ರಚೇತಸಂ ।
ಪ್ರತಪೇಚ್ಛಂಖಚಕ್ರಾದಿಹೇತಿಮಂತ್ರಂ ಸಮುಚ್ಚರನ್ ॥

—ಇತಿ ಹಾರೀತೇ (ಸ್ಮೃ. ಮು 49)

ಸುದರ್ಶನಾದಿಗಳನ್ನು ಪೂಜಿಸಿ, ಅವನ್ನು ಅಗ್ನಿಯಲ್ಲಿರಿಸಿ, ಆಯಾ ಅಭಿಮಾನಿ ದೇವತೆಗಳನ್ನು ಧ್ಯಾನಿಸಬೇಕು. ಷಡಕ್ಷರ (ವಿಷ್ಣು,ಕೃಷ್ಣ) ಮಂತ್ರದಿಂದ ಇಪ್ಪತ್ತು ಸಲ ಆಜ್ಯವನ್ನು ಹೋಮಿಸಬೇಕು ; ಇತರ ಆಯುಧ ಮಂತ್ರಗಳಿಂದ ಒಂದೊಂದು ಆಜ್ಯಾಹುತಿಯನ್ನು ಅರ್ಪಿಸಬೇಕು. ಅನಂತರ ಶಿಷ್ಯ ಸಮೇತನಾಗಿ (ವಿಷ್ಣು)ಮಂತ್ರ ವನ್ನು ಜಪಿಸುತ್ತ ಪ್ರದಕ್ಷಿಣ ನಮಸ್ಕಾರಗಳನ್ನು ಸಮರ್ಪಿಸಬೇಕು ; ಪೂರ್ವಾಭಿಮುಖ ನಾಗಿ ಏಕಾಗ್ರಚಿತ್ತದಿಂದ ಕುಳಿತ ಶಿಷ್ಯನಿಗೆ ಚಕ್ರಶಂಖಾದಿಧಾರಣ ಮಾಡಿಸ ಬೇಕು.

ಚಕ್ರಾದಿಧಾರಣ ಸ್ಥಳ

ದಕ್ಷಿಣೇ ತು ಭುಜೇ ಚಕ್ರಂ ವಾಮಾಂಸೇ ಶಂಖಮೇವ ಚ ।
ಗದಾಂ ತು ಫಾಲಮಧ್ಯೇ ತು ಹೃದಯೇ ನಂದಕಂ ತಥಾ ।
ಮಸ್ತಕೇ ತು ತಥಾ ಶಾರ್ಙ್ಗಮಂಕಯೇದ್ವಿಮಲಂ ತಥಾ ॥

—ಹಾರೀತಸ್ಮೃತಿ (ಸ್ಮೃ. ಮು)

ಬಲಭುಜದಲ್ಲಿ ಚಕ್ರ, ಎಡಭುಜದಲ್ಲಿ ಶಂಖ, ಫಾಲಮಧ್ಯದಲ್ಲಿ ಗದಾ, ಹೃದಯ ದಲ್ಲಿ ನಂದಕ ಮತ್ತು ಮಸ್ತಕದ ಮೇಲೆ ಶಾರ್ಙ್ಗ—ಈ ರೀತಿ ಚಕ್ರಾದಿಗಳನ್ನು ಧರಿಸ ಬೇಕು

ಸಕಲವರ್ಣದವರೂ ತಪ್ತಮುದ್ರೆಗಳನ್ನು ಧರಿಸಬೇಕು

ಏವಂ ತದೀಯಾ ವಿಪ್ರಾಶ್ಚ ಕ್ಷತ್ರಿಯಾ ವೈಶ್ಯಜಾತಯಃ ।
ಸ್ತ್ರಿಯಃ ಶೂದ್ರಾಸ್ತಥೈವಾನ್ಯೇ ನ ತಚ್ಚಿಹ್ನವಿವರ್ಜಿತಾಃ ॥

ಭವೇಯುಃ ಸರ್ವದಾ ತಸ್ಮಾಚ್ಛಂಖಚಕ್ರಗದಾಂಬುಜೈಃ ।
ಲೋಹೈರನಲಸಂತಪ್ತೈರಂಕಿತವ್ಯಾಃ ಕ್ರಮೇಣ ತು ॥
ವಿಪ್ರೋ ವಾ ಯದಿ ವಾ ಕ್ಷತ್ರೋ ವೈಶ್ಯಃ ಶೂದ್ರಸ್ತಥೈವ ಚ ।
ಅನ್ಯೇ ಸಂಕರಜಾತಾಶ್ಚ ಚಕ್ರಾಂಕಾ ಮಮ ವಲ್ಲಭಾಃ ॥

—ವಿಹಗೇಶ್ವರ ಸಂಹಿತಾ

ವಿಷ್ಣುಭಕ್ತರಾದ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು, ಸ್ತ್ರೀಯರು ಮೊದಲಾಗಿ ಸಕಲರೂ ತಪ್ತಮುದ್ರೆಗಳನ್ನು ತಪ್ಪದೆ ಧರಿಸಬೇಕು ; ಚಕ್ರಾದಿಲಾಂಛನ ಶೂನ್ಯರಾಗಿ ಎಂದೂ ಇರಕೂಡದು.

*ತಪ್ತಚಕ್ರಗಳನ್ನು ಧರಿಸದ ವೈಷ್ಣವನು ನಿಂದ್ಯ

ಯಥಾ ಶ್ಮಶಾನಗಂ ಕಾಷ್ಠಂ ಗರ್ಹಿತಂ ಸರ್ವಕರ್ಮಸು ।
ತಥಾಽಚಕ್ರಾಂಕಿತೋ ವಿಪ್ರಃ ಸರ್ವಕರ್ಮಸು ಗರ್ಹಿತಃ ॥

—ವಿಷ್ಣು ಸ್ಮೃತಿ

ಯೋಗ್ಯರೀತಿಯಲ್ಲಿ ತಮ್ಮ ಶ್ರೀಮಠದ ಗುರುಗಳಿಂದ ತಪ್ತಮುದ್ರೆಗಳನ್ನು ಸ್ವೀಕರಿಸದ ವಿಪ್ರನು ಸ್ಮಶಾನದ ಕಾಷ್ಠದಂತೆ ಸರ್ವಕರ್ಮಗಳಲ್ಲೂ ಅನರ್ಹವೆನ್ನಿಸುವನು.

ತಪ್ತಮುದ್ರೆಗಳನ್ನು ತಮ್ಮ ಮಠದ ಪೀಠಾಧೀಶರಿಂದಲೇ ಸ್ವೀಕರಿಸಬೇಕು

ತಸ್ಮಾತ್ತು ವಿಧಿನಾ ಬ್ರಹ್ಮನ್ ಗೃಹ್ಣೀಯಾತ್ ಸದ್ಗುರೋರಪಿ ।
ಯತೀನಾಂ ಯತಯಃ ಪ್ರೋಕ್ತಾ ಗುರವೋಽನ್ಯೇ ನ ಹಿ ಕ್ವಚಿತ್ ॥

—ರಾಮಾಮೃತಮಹಾರ್ಣವ (ಶ್ರೀ ಸತ್ಯಾಭಿನವತೀರ್ಥರು)

ಯತೀನಾಂ ಯತಯಃ – ಯತಿಶ್ರೇಷ್ಠಾಃ – ತಪ್ತಮುದ್ರಾಂಕನಾಧಿಕೃತಾ ಯತೀಶ್ವರಾಃ ಸ್ವಸದ್ಗುರವಃ.

—ರಾಮಾಮೃತಮಹಾರ್ಣವ ಟೀಕಾ

ಪರಮಹಂಸರಾದ ತಮ್ಮ (ಮಠದ) ಯತಿಶ್ರೇಷ್ಠರಿಂದಲೇ ವಿಧ್ಯುಕ್ತವಾಗಿ ತಪ್ತಮುದ್ರಾಧಾರಣ ಮಾಡಿಸಿಕೊಳ್ಳಬೇಕು ; ಬೇರೆಯವರಿಂದಲ್ಲ.

---

* 'ನ ಚಾಮುದ್ರಃ ಪ್ರವೇಷ್ಟವ್ಯೋ ಯಾವದಾಗಮನಂ ಮಮ ॥'
—ಎಂಬ ಹರಿವಂಶದ ಮಾತು (2/805) ತಪ್ತಮುದ್ರೆ ಧರಿಸದವರಿಗೆ ಎಂದೂ ವೈಕುಂಠದಲ್ಲಿ ಪ್ರವೇಶವಿಲ್ಲ ಎಂಬುದಕ್ಕೆ ಗಮಕವಾಗಿದೆ.

ತಪ್ತಮುದ್ರೆಗಳನ್ನು ಸ್ವತಃ ಹಾಕಿಕೊಳ್ಳುವ ಮತ್ತು ಅವಿಹಿತ ರೀತಿಯಲ್ಲಿ ಹಾಕಿಕೊಳ್ಳುವ, ಹಾಕಿಸಿಕೊಳ್ಳುವ ಜನಗಳ ಮುಖ ದರ್ಶನವೂ ಸಹ ಮಹಾಪಾಪಕರ.

[1]ಗಂಗಾಸ್ನಾನರತೋ ವಾऽಪಿ ಅಶ್ವಮೇಧರತೋऽಪಿ ವಾ ।
[2]ಶಂಖಚಕ್ರಾಂಕಿತತನುಂ ದೃಷ್ಟ್ವಾ ರೌರವಮಶ್ನುತೇ ॥

—ವಿಷ್ಣುಸ್ಮೃತಿ

ಅಯೋಗ್ಯ ರೀತಿಯಲ್ಲಿ ತಪ್ತಮುದ್ರೆಗಳನ್ನು ಧರಿಸುವವರ (ಸ್ವತಃ ಇತ್ಯಾದಿ) ದರ್ಶನವನ್ನು ಮಾಡಿದವನಿಗೂ ಸಹ ರೌರವ ನರಕ ಉಂಟಾಗುತ್ತದೆ ; ಆ ಪಾಪವು ಗಂಗೆಯಲ್ಲಿ ಮಿಂದರೂ, ಅಶ್ವಮೇಧ ಯಾಗವನ್ನು ಮಾಡಿದರೂ ಸಹ ಪರಿಹಾರವಾಗುವುದಿಲ್ಲ.

ಚಕ್ರಾಂಕಿತತನುಂ ದೃಷ್ಟ್ವಾ ಪಶ್ಯೇತ್ ಸೂರ್ಯಂ ತತೋ ನರಃ ।
ಜಪೇಚ್ಚ ಪೌರುಷಂ ಸೂಕ್ತಮನ್ಯಥಾ ನರಕಂ ವ್ರಜೇತ್ ।
ಬ್ರಾಹ್ಮಣಸ್ಯ ತನುರ್ಜ್ಞೇಯಾ ಸರ್ವದೇವಸಮಾಶ್ರಯಾ ।
ಸಾ ಚೇತ್ ಸಂತಾಪಿತಾ ರಾಜನ್ ಕಿಂ ವದಾಮಿ ಮಹೈನಸಃ ॥
ಬ್ರಾಹ್ಮಣಸ್ಯ ಚ ದೇಹೇಷು ಸರ್ವೇ ವೇದಾಃ ಸಮಾಗತಾಃ ।
ತೇ ಚ ಸಂತಾಪಿತಾ ರಾಜನ್ ಕಿಂ ವಕ್ಷ್ಯಾಮಿ ಮಹೈನಸಃ ॥

—(ಸ್ಮೃ. ಮು. ಮತ್ತು ತ. ಚ.)

ಬ್ರಾಹ್ಮಣನ ಶರೀರವೆಂದರೆ ಸಕಲ ದೇವತೆಗಳ ಹಾಗೂ ಸಕಲವೇದಗಳ ತವರು; ಅಂತಹ ಅಮೌಲ್ಯ ಶರೀರವನ್ನು ಶಾಸ್ತ್ರನಿಷಿದ್ಧ ರೀತಿಯಲ್ಲಿ ಸುಟ್ಟುಕೊಂಡರೆ ಸಕಲ ದೇವತೆಗಳಿಗೂ, ಸಕಲವೇದಗಳಿಗೂ ಬೆಂಕಿ ಇಟ್ಟ ಮಹಾಪಾತಕವು ಉಂಟಾಗುತ್ತದೆ ; ಅಂತಹವನನ್ನು ಆಕಸ್ಮಿಕವಾಗಿ ಕಂಡರೂ ಸಹ ತಕ್ಷಣ ಆ ಪಾಪ ಪರಿಹಾರಕ್ಕಾಗಿ ಸೂರ್ಯ ದರ್ಶನ ಮಾಡಿ ಪುರುಷ ಸೂಕ್ತವನ್ನು ಜಪಿಸಿ ಶುದ್ಧನಾಗಬೇಕು ; ಇಲ್ಲವಾದಲ್ಲಿ ನರಕವು ತಪ್ಪಿದ್ದಲ್ಲ.

ತಪ್ತಮುದ್ರಾಧಾರಣೆಯ ಹಿನ್ನೆಲೆ

ವೃತ್ರೇಣ ನಿರ್ಜಿತಾಃ ಸರ್ವೇ ಪುರಾ ದೇವಾಃ ಸವಾಸವಾಃ ।
ಹೃತಾಗಾರಬಲಾ ದೈತ್ಯೈರ್ದೇವಾಃ ಸರ್ವಜನೇಶ್ವರಾಃ ॥

---

[1]ನಿಷೇಧವಾಕ್ಯಾದ್ಭೀತಿಸ್ತು ತಪ್ತಾತಪ್ತಾಂಕಯೋಃ ಸಮಾ ।
ತತ್ಸರ್ವಂ ತಪ್ತಗಂ ಕುರ್ವನ್ ಸಮಃ ಸ್ವಾರ್ಥ ಪರಾರ್ಥಯೋಃ ॥
ಅಮಂತ್ರಹೋಮಮೂಲಾಂಕವಿಷಯಂ ಕುರು ಲಾಘವಾತ್ ॥

—ಶ್ರೀ ವಾದಿರಾಜಸ್ವಾಮಿಗಳು (ಚಕ್ರಸ್ತುತಿ 21, 22)

[2]'ಗಂಗಾಸ್ನಾನರತೋ ವಾऽಪಿ' ಇತ್ಯೇತದಪಿ ಅವಿಧಿನಾ ಕೃತಚಕ್ರಾದಿಧಾರಣ ನಿಷೇಧಪರಮ್ ।

—ಸ್ಮೃತಿಮುಕ್ತಾವಲಿ ಪು. 45

*ಬ್ರಹ್ಮಾದಯೋ ಗತಾಃ ಸರ್ವೇ ಶಂಕರಪ್ರಮುಖಾಸ್ತದಾ ।
ತ್ರಾಹಿ ತ್ರಾಹಿ ಜಗನ್ನಾಥ ವೃತ್ರೇಣ ವಿಜಿತಾ ವಯಂ ॥
ತ್ರೈಲೋಕ್ಯಾಧಿಪತಿರ್ಜಾತೋ ವೃತ್ರೋ ನಿರ್ಜಿತ ಕಂಟಕಃ ।
ಯಥಾ ಭಾಗೇನ ಚಾಸ್ಮಾಕಂ ತಥಾ ಕುರು ಜನಾರ್ದನ ॥

ಶ್ರೀಭಗವಾನುವಾಚ

ಮದಾಯುಧೈಃ ಶಂಖಚಕ್ರೈರ್ಲಾಂಛಯಿತ್ವಾ ಸುರೋತ್ತಮಾಃ ।
ಯುಧ್ಯತಾಂ ಸಮರೇ ದೈತ್ಯೈರ್ಮತ್ಪ್ರಸಾದೇನ ದೇವತಾಃ ॥
ಮಮಾಯುಧಾಂಕಿತೇ ದೇಹೇ ಭವತಾಂ ಸುರಸತ್ತಮಾಃ ।
ಕ್ಷಯಂ ಯಾಸ್ಯಂತಿ ಸಮರೇ ಶತ್ರವೋ ಮತ್ಪ್ರಸಾದತಃ ॥
ಏವಮುಕ್ತಾಃ ಪ್ರಣೇಮುಸ್ತೇ ಬ್ರಹ್ಮರುದ್ರಪುರೋಗಮಾಃ ।
ಹತ್ವಾ ವೃತ್ರಂ ಗತಾ ದೇವಾಃ ಸ್ವಸ್ಥಾನಂ ತು ಮುದಾನ್ವಿತಾಃ ॥
ತತಃ ಪ್ರಭೃತಿ ಧರ್ಮಾಢ್ಯಾಃ ಸರ್ವೇ ದೇವಾಃ ಸವಾಸವಾಃ ।
ಚಿಹ್ನಂ ಕೃತ್ವಾಽಽಯುಧೈಃ ಸ್ಥಾನೇ ನಿತ್ಯಂ ಪ್ರೀತಾಸ್ತ್ವತಂದ್ರಿತಾಃ ॥
ಋಷಯಃ ಸಿದ್ಧಗಂಧರ್ವಾಃ ಪಾತಾಲೇ ಪನ್ನಗೇಶ್ವರಾಃ ।
ದೇಹೇ ಕುರ್ವಂತಿ ಚಿಹ್ನಾನಿ ಶಂಖಚಕ್ರಮಯಾನ್ಯಪಿ ॥ —ಪದ್ಮಪುರಾಣ

ಹಿಂದೊಮ್ಮೆ ಇಂದ್ರಾದಿ ದೇವತೆಗಳೆಲ್ಲ ವೃತ್ರಾಸುರನಿಂದ ಪರಾಜಿತರಾದಾಗ ಅವರೆಲ್ಲರೂ ಮಹಾವಿಷ್ಣುವಿನ ಬಳಿ ಹೋಗಿ ತಮ್ಮನ್ನು ವೃತ್ರಾಸುರನ ಆಕ್ರಮಣದಿಂದ ಪಾರು ಮಾಡಲು ಪ್ರಾರ್ಥಿಸಿಕೊಂಡರು. ಆಗ ಶ್ರೀ ನಾರಾಯಣನು 'ಎಲೈ ದೇವತೆಗಳೇ' ನೀವೆಲ್ಲರೂ ನನ್ನ ಚಕ್ರಶಂಖಾದಿಲಾಂಛನಗಳನ್ನು ಧರಿಸಿಕೊಂಡವರಾಗಿ ಆ ವೃತ್ರಾದಿ ದೈತ್ಯರೊಂದಿಗೆ ಯುದ್ಧ ಮಾಡಿರಿ ಆಗ ನನ್ನ ಆಯುಧಲಾಂಛನದ ಪ್ರಭಾವದಿಂದ ವೃತ್ರಾದಿ ದೈತ್ಯರೆಲ್ಲ ಹತರಾಗುವರು ; ನಿಮಗೆ ವಿಜಯಶ್ರೀ ಲಭಿಸುವುದು' ಎಂದು ಉಪದೇಶಿಸಿದನು. ಅದರಂತೆಯೇ ಮಾಡಿದ ಇಂದ್ರಾದಿ ದೇವತೆಗಳು ವೃತ್ರಾದಿ ಶತ್ರುಗಳನ್ನು ಜಯಿಸಿ ಕೃತಾರ್ಥರಾದರು; ಅಂದಿನಿಂದ ಸಮಸ್ತ ವೈಷ್ಣವರೂ ಶತ್ರು ಜಯಾದಿ ಗುರಿಯನ್ನು ಸಾಧಿಸಲು ಚಕ್ರಾದಿಗಳ ಧಾರಣೆಯು ಅತ್ಯವಶ್ಯ ಎಂಬುದನ್ನು ಅರಿತು, ಅವನ್ನು ಧರಿಸತೊಡಗಿದರು. (ಚಕ್ರಾದಿಗಳ ಧಾರಣೆಯು ಶತ್ರುಜಯಕ್ಕೂ ಕಾಮಕ್ರೋಧಾದಿ ಅರಿಷಡ್ವರ್ಗದ ಜಯಕ್ಕೂ ಪರಮಸಾಧನಗಳಲ್ಲೊಂದು ಎಂಬುದು ಖಚಿತ ಎಂದು ಭಾವ)

ಸಮರ್ಪಿತಂ ಮಯಾ ಭವೇತ್ಸ್ವಮಧ್ವನುತ್ತಮಾಣಿನಾ ।
ರಮಾರಮೇಶಪಾದಯೋಃ ಪ್ರಭಂಜನಾಭಿಧಾಯುಜಾ ॥

—೦—

* 'ಇಲ್ಲಬ್ರಹ್ಮ' ಎಂದರೆ 'ಬೃಹಸ್ಪತಿ' ಎಂದು ಅರ್ಥ 'ಬ್ರಹ್ಮಾ ಬೃಹಸ್ಪತಿಃ'
—ಗೀತಾಭಾಷ್ಯಟೀಕಾ (ಪ್ರಮೇಯದೀಪಿಕಾ)

ಪರಿಶಿಷ್ಟ–೧

'ತಪ್ತಮುದ್ರಾಧಾರಣ'ದ ಬಗ್ಗೆ ಶ್ರುತ್ಯಾದಿಗಳು

—o—

[1]ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ ।
[2]ಅತಪ್ತತನೂರ್ನ ತದಾಮೋ ಅಶ್ನುತೇ ಶ್ರುತಾಸ ಇದ್ವಹಂತಸ್ತತ್ಸಮಾ ಶತಾ ॥
[3]ಚಕ್ರಂ ಬಿಭರ್ತಿ ವಪುಷಾಭಿತಪ್ತಂ ಬಲಂ ದೇವಾನಾಮಮೃತಸ್ಯ ವಿಷ್ಣೋಃ ।
ಸ ಏತಿ ನಾಕಂ ದುರಿತಾ ನಿಧೂಯ ವಿಶಂತಿ ಯದ್ಯತಯೋ ವೀತರಾಗಾಃ ॥

—ಆಥರ್ವಣೀಶ್ರುತಿಃ

ಚರಣಂ ಪವಿತ್ರಂ ವಿತತಂ ಪುರಾಣಂ ಯೇನ ಪೂತಸ್ತರತಿ ದುಷ್ಕೃತಾನಿ ।
ತೇನ ಪವಿತ್ರೇಣ ಶುದ್ಧೇನ ಪೂತಾ ಅತಿಪಾಪ್ಮಾನಮರಾತಿಂ ತರೇಮ ॥

—ಕಾಠಕೀಶ್ರುತಿಃ

ಲೋಕಸ್ಯ ದ್ವಾರಮರ್ಚಿಮತ್ ಪವಿತ್ರಂ
ಜ್ಯೋತಿಷ್ಮದ್ಭ್ರಾಜಮಾನಂ ಮಹಸ್ವತ್ ।
ಅಮೃತಸ್ಯ ಧಾರಾ ಬಹುಧಾ ದೋಹಮಾನಂ
ಚರಣಂ ನೋ ಲೋಕೇ ಸ್ವಧಿತಾಂ ದಧಾತು ॥

—ಕಾಠಕೀಶ್ರುತಿಃ

---

[1]'ಸುದರ್ಶನಂ ಸಹಸ್ರಾರಂ ಪವಿತ್ರ ಚರಣಂ ಪವಿಃ'

—ಇತಿವೇದನಿಘಂಟೌ (ಸ್ಮೃ. ಮು.)

ಪವಿತ್ರಂ ಚರಣಂ ಚಕ್ರಂ ಲೋಕೋದ್ಧಾರಂ ಸುದರ್ಶನಮ್ ।
ಪರ್ಯಾಯವಾಚಕಾ ಹ್ಯೇತೇ ಚಕ್ರಸ್ಯ ಪರಮಾತ್ಮನಃ ॥

—ಇತಿ ಶ್ರೀಶಾಸ್ತ್ರೇ (ಸ್ಮೃ. ಮು.)

[2]ಶ್ರುತಾಸೋ ವಹ್ನಿತಪ್ತೇನ ಚಕ್ರೇಣ ತಪ್ತಾಃ ।
ಕೇವಲಮೇಕವಾರಂ ತಪ್ತಾಃ ಕಿಂತು ವಹಂತ ಇತ್ಯ
ಗೋಪೀಚಂದನಾದಿನಾ ನಿತ್ಯಂ ವಹಂತ ಏವ ॥

—ಸ್ಮೃತಿಮುಕ್ತಾವಲಿ (ಪು.43)

[3]ಅತ್ರ ಕ್ವಚಿಚ್ಚಕ್ರಾದ್ಯೇಕವಿಧಾನೇಽಪಿ ಕ್ವಚಿದ್ದ್ವಿತ್ರಿಪಂಚಾಯುಧಾನೀತಿ ವಿಧಾನೇಽಪಿ ಪಂಚಾಯುಧಧಾರಣಂ ಮುಖ್ಯಮ್ । ಅಶಕ್ತೌ ಚಕ್ರಮಾತ್ರಧಾರಣಂ ವಾ ಶಂಖಚಕ್ರಾದಿಧಾರಣಂ ವೇತ್ಯಾದಿ ದ್ರಷ್ಟವ್ಯಮ್ ॥ ಅತ ಏವ ಹಾರೀತಸ್ಮೃತೌ-

ಚಕ್ರಾಂಕಿತಭುಜಾಃ ಕೇಚಿತ್ ಕೇಚಿಚ್ಛಂಖಧರಾಸ್ತಥಾ ।
ಶಂಖಚಕ್ರಧರಾಃ ಕೇಚಿತ್ ಕುಲೇ ವಿಷ್ಣುಪರಿಗ್ರಹಾಃ ॥—ಇತಿ (ಸ್ಮೃ. ಮು.)

ಧೃತೋರ್ಧ್ವಪುಂಡ್ರಃ ಕೃತಚಕ್ರಧಾರೀ
ವಿಷ್ಣುಂ ಪರಂ ಧ್ಯಾಯತಿ ಯೋ ಮಹಾತ್ಮಾ ।
ಸ್ವರೇಣ ಮಂತ್ರೇಣ ಸದಾ ಹೃದಿಸ್ಥಂ
ಪರಾತ್ಪರಂ ಯನ್ಮಹತೋ ಮಹಾಂತಂ ॥

—ಇತಿ ಕಠವಲ್ಲೀಶ್ರುತಿಃ

ಚಮೂಷಚ್ಛ್ಯೇನಃ ಶಕುನೋ ಬಿಭೃತ್ವಾ
ಗೋವಿಂದುರ್ದ್ರಪ್ಸ ಆಯುಧಾನಿ ಬಿಭ್ರತ್ ।
ಅಪಾಂ ಮೂರ್ಮಿಂ ಸಚಮಾನಃ ಸಮುದ್ರಂ
ತುರೀಯಂ ಧಾಮ ಮಹಿಷೋ ವಿವಕ್ತಿ ॥

—ಇತಿ ಋಕ್ಶಾಖಾಯೋಃ ಪಠಿತಾ ಶ್ರುತಿಃ

ಪ್ರ ತೇ ವಿಷ್ಣೋ ಅಬ್ಜಚಕ್ರೇ ಪವಿತ್ರೇ
ಜನ್ಮಾಂಬೋಧಿಂ ತರ್ತವೇ ಚರ್ಷಣೀಂದ್ರಾಃ ।
ಮೂಲೇ ಬಾಹ್ವೋರ್ದಧತೇಽನ್ಯೇ ಪುರಾಣಾಃ
ಲಿಂಗಾನ್ಯಂಗೇ ತಾವಕಾನ್ಯರ್ಪಯಂತಿ ॥

—ಭಾಸ್ಕರಸಂಹಿತಾ

ಏಭಿರ್ವಯಮುರುಕ್ರಮಸ್ಯ ಚಿಹ್ನೈರಂಕಿತಾ ಲೋಕೇ ಸುಭಗಾ ಭವಾಮಃ ।
ತೇ ವಿಷ್ಣೋಃ ಪರಂ ಪದಂ ಯೇ ಭಜಂತೀಹ ಲಾಂಛಿತಾಃ ॥

—ಅಥರ್ವಣೀಶ್ರುತಿಃ

ನಾನ್ಯಂ ದೇವಂ ನಮಸ್ಕುರ್ಯಾನ್ನಾನ್ಯಂ ದೇವಂ ನಿರೀಕ್ಷಯೇತ್ ।
ಚಕ್ರಾಂಕಿತಃ ಸದಾ ತಿಷ್ಠೇನ್ಮದ್ಭಕ್ತಃ ಪಾಂಡುನಂದನ ॥

—ಇತಿ ಮಹಾಭಾರತೇ

ಭುಜಯುಗಮಪಿ ಚಿಹ್ನೈರಂಕಿತಂ ಯಸ್ಯ ವಿಷ್ಣೋಃ
ಪರಮಪುರುಷನಾಮ್ನಃ ಕೀರ್ತಿತಂ ಯಸ್ಯ ವಾಚಿ ।
ಋಜುತರಮಪಿ ಪುಂಡ್ರಂ ಮಸ್ತಕೇ ಯಸ್ಯ ಕಂಠೇ
ಸರಸಿಜಮಣಿಮಾಲಾ ಯಸ್ಯ ತಸ್ಯ ಸ್ಮ ದಾಸಾ(ವಶ್ಯಾ)ಃ ॥

—ಇತಿ ವಿಷ್ಣುಪುರಾಣೇ

ದಕ್ಷಿಣೇ ತು ಭುಜೇ ವಿಪ್ರೋ ಬಿಭೃಯಾದ್ವೈ ಸುದರ್ಶನಂ ।
ಸವ್ಯೇ ತು ಶಂಖಂ ಬಿಭೃಯಾದಿತಿ ಬ್ರಹ್ಮವಿದೋ ವಿದುಃ ॥

—ಮಹೋಪನಿಷದಿ ಬ್ರಹ್ಮಸೂಕ್ತೇ

ಅಗ್ನಿನಾ ವೈ ಹೋತ್ರಾ ಚಕ್ರಂ ಪಾಂಚಜನ್ಯಂ
ಸುತಪ್ತಂ ದ್ವಿಭುಜೇ ಧಾರ್ಯತೇ ಆತ್ಮಹಿತಮಾಚರೇತ್ ।
ಆಚಾರ್ಯಾಯ ಸ್ವಮುಖಂ ಪ್ರತಿಪಾದ್ಯತೇ ತಸ್ಮಾದ್ವೈಕುಂಠೋ ಭವತಿ ।
ನ ಪುನರಾಗಮನಂ ಸಾಯುಜ್ಯಂ ಸಲೋಕತಾಮಾಪ್ನೋತೀತ್ಯುಪನಿಷತ್ ।

“ಪವಿತ್ರಮಿತ್ಯಗ್ನಿರಗ್ನಿರ್ವೈ ಸಹಸ್ರಾರಃ ಸಹಸ್ರಾರೋ ನೇಮಿರ್ನೇಮಿನಾ ತಪ್ತತನುಃ ಸಹ ಬ್ರಹ್ಮಣಃ ಸಾಯುಜ್ಯಂ ಸಲೋಕತಾಮಾಪ್ನೋತಿ”

—ಅಥರ್ವಣೀಶ್ರುತಿಃ

ಶಿವಕೇಶವರ ಚಿಹ್ನೆಗಳನ್ನು ಒಟ್ಟಾಗಿ ಧರಿಸುವುದು ಸಹ ವೈಷ್ಣವರಿಗೆ ನಿಷಿದ್ಧ

*ದ್ವಿಜಂ ಚ ತಪ್ತಶಂಖಾದಿ ಲಿಂಗಾಂಕಿತತನುಂ ಚ ವಾ ।
ಸಂಭಾಷ್ಯ ರೌರವಂ ಯಾತಿ ಯಾವದಿಂದ್ರಾಶ್ಚತುರ್ದಶ ॥
ಶಿವಕೇಶವಯೋಶ್ಚಾಪಿ ಚಕ್ರಶೂಲಾದಿಕಂ ದ್ವಿಜಃ ।
ನ ಧಾರಯೇತ ಮತಿಮಾನ್ ವೈದಿಕೇ ಚ ಮತೇ ಸ್ಥಿತಃ ॥
ತ್ಯಕ್ತ ವೈದಿಕಮರ್ಯಾದೋ ನಾಸ್ತಿಕಾ ನಟನರ್ತಕಾಃ ।
ತೇ ಧರಂತ್ಯೇವ ಚಿಹ್ನಾನಿ ಶಿವಯೋರ್ಭಸ್ಮಬುದ್ಧಯಃ ॥
ವೇದಾಕ್ಷರವಿಹೀನಾನಾಂ ನಾಸ್ತಿಕಾನಾಂ ದ್ವಿಜನ್ಮನಾಮ್ ।
ವಿಹಿತಂ ಧಾರಣಂ ನಿತ್ಯಂ ಚಿಹ್ನಾನಾಂ ಕೇಶವೇಶಯೋಃ ॥

—ಸ್ಮೃತಿವಾಕ್ಯಗಳು (ಸ್ಮೃ. ಮು. ಮತ್ತು ತ.ಚ.)

ತಪ್ತಚಕ್ರಧಾರಣೆಯನ್ನು ನಿಷೇಧಿಸುವ ವಾಕ್ಯಗಳು ಪ್ರಕ್ಷಿಪ್ತ

ಪರೋದೀರಿತವಚನಾನಾಂ ಸ್ಮೃತಿತ್ವಮಭ್ಯುಪಗಮ್ಯ ಇದ ಮುದಿತಂ ।
ವಸ್ತುತಸ್ತು – ತೇಷಾಂ ಸ್ಮೃತಿತ್ವಮೇವ ನಾಸ್ತಿ । (ಇತ್ಯಾದಿ)

—(ತಪ್ತಚಕ್ರಭೂಷಣ)

(ಕೇಚಿತ್) ।....ಇತಿ ವೈಷ್ಣವಾಶ್ವಲಾಯನವಚನಾತ್ ಶಂಖಚಕ್ರಾದಿಧಾರಣಂ ತು ಶೂದ್ರಾದಿ ವಿಷಯಮಿತ್ಯಾಹುಃ । ತತ್ತು ವಿಷ್ಣುದ್ವೇಷಮೂಲತ್ವಾದಶುದ್ಧಂ । ಬೃಹನ್ನಾರದೀಯ ವಿಷ್ಣುಪುರಾಣ ಆಶ್ವಲಾಯನಸ್ಮೃತ್ಯಾದೌ ಬಹುಪುಸ್ತಕೇಷು ಏಷಾಂ ವಚನಾನಾಮಭಾವಾತ್ । ಕ್ವಚಿತ್ತತ್ಸತ್ವೇಽಪಿ ಬಹ್ವೃಚಾದಿಶ್ರುತಿಹಾರೀ-ತಾದಿಸ್ಮೃತಿ ಕೂರ್ಮವರಾಹವಾಯುಪುರಾಣಾದಿ ವಿರುದ್ಧತ್ವೇನ ಔದುಂಬರೀ ಸರ್ವಾವೇಷ್ಟನಸ್ಮೃತಿವದೇಷಾಂ ವಚನಾನಾಮಪ್ರಾಮಾಣ್ಯಾತ್ । ಶ್ರುತ್ಯಾದೀನಾಂ ತಪ್ತಮುದ್ರಾಧಾರಣವಿಷಯೇ ಚ ನಿರವಕಾಶತ್ವೇನ ಅರ್ಥಾಂತರಾಭಾವಸ್ಯಾಂತರಾನು-ಪಪತ್ತ್ಯೋಪಪಾದಿತತ್ವಾತ್ । ಏಷಾಂ ವಚನಾನಾಂ ಬೌದ್ಧಾದಿದೈತ್ಯಮತಾನು-ವಾದಕತ್ವೇನ ಸಾವಕಾಶತ್ವಾತ್ । ಅನುವಾದಸ್ಯ ದೂಷಣಾರ್ಥತ್ವೇಽಪಿ ದೂಷಣಾನಾಂ ಸ್ಪಷ್ಟತ್ವೇನಾನುಕ್ತೇಃ । ಸ್ಮೃತ್ಯರ್ಥಸಾಗರ ।

—o—

*ತೇಷಾಂ ವಚನಾನಾಂ ಶಿವಕೇಶವಲಿಂಗಾನಾಂ ಮಿಲಿತ್ವಾ ಧಾರಣೇ ದೋಷಪ್ರತಿಪಾದಕತ್ವಾತ್ । (ಸ್ಮೃ. ಮು. 53)
ಶಿವಕೇಶವಯೋಶ್ಚಿಹ್ನಮಿತ್ಯಸ್ಯ ಉಭಯಚಿಹ್ನಧಾರಣನಿಷೇಧಪರತ್ವೇನ ವಿಷ್ಣುಚಕ್ರಧಾರಣಾದೂಷಕತ್ವಾತ್ । —(ತ.ಚ.)

ಸಹಸ್ರಾರಸ್ತುತಿಃ

ಸಹಸ್ರಾರ ಮಹಾಶೂರ ರಣಧೀರ ಗಿರಾ ಸ್ತುತಿಮ್ ।
ಷಟ್ಕೋಣ ರಿಪುಹೃದ್ಬಾಣ ಸಂತ್ರಾಣ ಕರವಾಣಿ ತೇ ॥ ೧ ॥

ಯಸ್ತ್ವತ್ತಸ್ತಪ್ತಸುತನುಃ ಸೋಽತ್ತಿ ಮುಕ್ತಿಫಲಂ ಕಿಲ ।
ನಾತಪ್ತತನುರಿತ್ಯಸ್ತೌತ್ ಖ್ಯಾತಾ ವಾಕ್ ತ್ವಾಂ ಮಹೌಜಸ ॥ ೨ ॥

ಹತವಕ್ರದ್ವಿಷಚ್ಚಕ್ರ ಹರಿಚಕ್ರ ನಮೋಽಸ್ತು ತೇ ।
ಪ್ರಕೃತಿಘ್ನಾಸತಾಂ ವಿಘ್ನ ತ್ವಮಭಗ್ನಪರಾಕ್ರಮ ॥ ೩ ॥

ಕರಾಗ್ರೇ ಭ್ರಮಣಂ ವಿಷ್ಣೋರ್ಯದಾ ತೇ ಚಕ್ರ ಜಾಯತೇ ।
ತದಾ ದ್ವಿಧಾಽಪಿ ಭ್ರಮಣಂ ದೃಶ್ಯತೇಽಂತರ್ಬಹಿರ್ದ್ವಿಷಾಮ್ ॥ ೪ ॥

ವರಾದವಧ್ಯದೈತ್ಯೌಘಶಿರಃಖಂಡನಚಾತುರೀ ।
ಹರೇರಾಯುಧ ತೇ ದೃಷ್ಟ್ವಾ ನ ದೃಷ್ಟ್ವಾ ಯಾ ಹರಾಯುಧೇ ॥ ೫ ॥

ಅವಾರ್ಯವೀರ್ಯಸ್ಯ ಹರೇಃ ಕಾರ್ಯೇಷು ತ್ವಂ ಧುರಂಧರಃ ।
ಅಸಾಧ್ಯಸಾಧಕೋ ರಾಟ್ ತೇ ತ್ವಂ ಚಾಸಾಧ್ಯಸ್ಯ ಸಾಧಕಃ ॥ ೬ ॥

ಯೇ ಛಿನ್ನಕಂಧರಾಶ್ಚಕ್ರ ದೈತೇಯಾಸ್ತವ ಧಾರಯಾ ।
ತ ಏವ ಚಿತ್ರಮನಯಂಸ್ತಥಾಽಪ್ಯಚ್ಛಿನ್ನಕಂಧರಾಮ್ ॥ ೭ ॥

ಅರೇ ತವಾಗ್ರೇ ನೃಹರೇರರಿಃ ಕೋಽಪಿ ನ ಜೀವತಿ ।
ನೇಮೇ ತವಾಗ್ರೇ ಕಾಮಾದ್ಯಾ ನೇಮೇ ಜೀವಂತ್ವಹೋ ದ್ವಿಷಃ ॥ ೮ ॥

ಪವಿತ್ರ ಪವಿವತ್ತ್ರಾಹಿ ಪವಿತ್ರೀಕುರು ಚಾಶ್ರಿತಾನ್ ।
ಚರಣ ಶ್ರೀಶಚರಣೌ ಸ್ಥಿರೀಕುರು ಮನಸ್ಸು ನಃ ॥ ೯ ॥

ಯಸ್ತ್ವಂ ದುರ್ವಾಸಸಃ ಪೃಷ್ಠನಿಷ್ಠೋ ದೃಷ್ಟೋಽಖಿಲೈಃ ಸುರೈಃ ।
ಅಸ್ತಾವಯಃ ಸ್ವಭರ್ತಾರಂ ಸ ತ್ವಂ ಸ್ತಾವಯ ಮದ್ಗಿರಾ ॥ ೧೦ ॥

ಭೂಸ್ಥದುರ್ದರ್ಶನಂ ಸರ್ವಂ ಧಿಕ್ಕುರುಷ್ವ ಸುದರ್ಶನ ।
ವಾಯೋಃ ಸುದರ್ಶನಂ ಸರ್ವಸ್ಯಾಯೋಧ್ಯಂ ಕುರು ತೇ ನಮಃ ॥ ೧೧ ॥

ಸುಷ್ಟುದರ್ಶಯ ಲಕ್ಷ್ಮೀಶತತ್ತ್ವಂ ಸೂರ್ಯಾಯುತಪ್ರಭ ।
ದ್ವಾರಂ ನಃ ಕುರು ಹರ್ಯಾಪ್ತ್ಯೈ ಕೃತದ್ವಾರ ತಮಸ್ಯಪಿ ॥ ೧೨ ॥

ಪದ್ಯಾನಿ ನಿರವದ್ಯಾನಿ ವಾದಿರಾಜಾಭಿಧಃ ಸುಧೀಃ ।
ದ್ವಾದಶಂ ದ್ವಾದಶಾರಸ್ಯ ಚಕ್ರಸ್ಯ ಸ್ತುತಯೇಽಕೃತ ॥ ೧೩ ॥

॥ ಇತಿ ಶ್ರೀವಾದಿರಾಜಯತಿಕೃತಾ ಸಹಸ್ರಾರಸ್ತುತಿಃ ॥

ಪರಿಶಿಷ್ಟ – ೩

ಚಕ್ರಸ್ತುತಿಃ

ದೋಷೌಘವಾರಣಂ ಯಸ್ಯ ಧಾರಣಂ ಮೋಕ್ಷಕಾರಣಮ್ ।
ನ ವೈದಿಕಂ ತಪ್ತಚಕ್ರಧಾರಣಂ ಯದಿ ಮನ್ಯಸೇ ॥ ೧ ॥
ಗ್ರಂಥಾದೌ ಮಂಗಲಂ ತರ್ಹಿ ಕಸ್ಮಾನ್ನಾವೈದಿಕಂ ತವ ।
ಶಿಷ್ಟಾಚಾರಾತ್ ಸ್ಮೃತಿಃ ಕಲ್ಪ್ಯಾ ಸ್ಮೃತೇಶ್ಚ ಶ್ರುತಿಕಲ್ಪನಾ ॥ ೨ ॥
ಯದಿ ತತ್ರ ತಥೈತಸ್ಮಿನ್ ಕಿನ್ನ ಕಲ್ಪಯಸಿ ಶ್ರುತಿಮ್ ।
ದ್ವಾರಕಾಯಾಯಿಭಿಃ ಸರ್ವೈರದ್ಯಾಪಿ ಪ್ರಾಕ್ಪ್ರವೇಶತಃ ॥ ೩ ॥
ನಿಂಬಾದಿತ್ಯಾನುಗೈಃ ಪ್ರಾಜ್ಞೈರ್ಮಾಯಾವಾದ್ಯೇಕದೇಶಿಭಿಃ ।
ವಿಷ್ಣುಸ್ವಾಮಿಮತಸ್ಥೈಶ್ಚ ರಾಮಾನುಜಮತಾಶ್ರಯೈಃ ॥ ೪ ॥
ತತ್ತ್ವವಾದಿಜನಾಚಾರ್ಯೈಃ ಶಿಷ್ಟಶ್ರೇಷ್ಠೈರನುಷ್ಠಿತೇ ।
ಕೈಶ್ಚಿಚ್ಚೀರ್ಣಮಿದಂ ನೋಚೇತ್ತ್ಯಕ್ತಂ ತದಪಿ ನಾಸ್ತಿಕೈಃ ॥ ೫ ॥
ಬಹುಶಿಷ್ಟಜನಾಚಾರಃ ಪ್ರಮಾಣಮುಭಯತ್ರ ಚ ।
ಸ್ವಮೂಲಗ್ರಂಥಭಾಗೇಷು ತಥಾ ಪ್ರಕರಣೇಷು ಚ ॥ ೬ ॥
ನಿಬಂಧೇಷು ಚ ಸರ್ವೇಷು ಕೇನಾಪೀದಂ ನ ದೂಷಿತಮ್ ।
ಅನಾಚಾರಸ್ತು ಕೇಷಾಂಚಿದನಾಚಾರಃ ಪ್ರಕಲ್ಪ್ಯತಾಮ್ ॥ ೭ ॥
ತ್ಯಜೇದೇಕಂ ಕುಲಸ್ಯಾರ್ಥಮಿತಿ ನ್ಯಾಯಂ ವಿಜಾನತ ।
ನೃಸಿಂಹಪರಿಚರ್ಯಾಯಾಂ ರಾಮಾರ್ಚಾಚಂದ್ರಿಕಾದಿಷು ॥ ೮ ॥
ಶ್ರುತಿಸ್ಮೃತಿಪುರಾಣೋಕ್ತ್ಯಾ ತೈರಪೀದಂ ಪ್ರಸಾಧಿತಮ್ ।
ನ ನಃ ಪೂರ್ವೈಃ ಪರಾಕ್ರಾಂತಂ ಸರ್ವಸಂಪ್ರತಿಪತ್ತಿತಃ ॥ ೯ ॥
ಇದಾನೀಮಾಗ್ರಹಾದೇವ ವಿವದಂತೇ ಕ್ವಚಿತ್ ಕ್ವಚಿತ್ ।
ದುರಾಗ್ರಹಗ್ರಹಂ ತೇಷಾಂ ಕೇಷಾಂಚಿನ್ಮನಸಿ ಸ್ಥಿತಮ್ ॥ ೧೦ ॥
ನಿವರ್ತಯೇತ್ಸುಪ್ರಯುಕ್ತಃ ಶ್ರೌತೋ ಮಂತ್ರೋ ಮಹಾತ್ಮಭಿಃ ।
ಅವೈದಿಕಮಿದಂ ಚೇತ್ತೇ ಬ್ರಹ್ಮೈಕ್ಯಂ ವೈದಿಕಂ ಕುತಃ ॥ ೧೧ ॥
ಶ್ರುತಯಸ್ತತ್ರ ಚೇತ್ ಸಂತಿ ನ ಸಂತಿ ಕಿಮಿಹಾಗಮಾಃ ।
ಯದ್ಯೇತೇಷಾಮಿತೋಽನ್ಯೋಽರ್ಥಃ ಕಲ್ಪ್ಯತೇ ಸ್ವಕಪೋಲತಃ ॥ ೧೨ ॥

ಶ್ರುತಿಸ್ಮೃತಿಸಮಾಖ್ಯಾತಸ್ತತ್ರಾಸ್ಯಾರ್ಥೋ ನ ಕಿಂ ಶ್ರುತಃ ।
ಆಗ್ರಹೋಽಯಂ ಪರೇಷಾಂ ಚೇತ್ತಥಾಽಯಂ ಕಿಂತು ನಾಗ್ರಹಃ ॥ ೧೩ ॥

ವಾದಿವಿಪ್ರತಿಪನ್ನಾಭಿಃ ಶ್ರೌತತ್ವಂ ತೂಭಯೋಃ ಸಮಮ್ ।
ಯದ್ಯಶ್ರೌತಮಿದಂ ಕರ್ಮ ಯಜ್ಞೋಽಶ್ರೌತಃ ಕಥಂ ನ ತೇ ॥ ೧೪ ॥

ತನ್ಮೂಲಭೂತವೇದಾನಾಮುತತ್ತ್ವಾವೇದಕತ್ವತಃ ।
ಅನ್ಯಾರ್ಥಕಲ್ಪನೇನಾಪಿ ತತ್ತ್ವಾವೇದಕತಾ ಗತಾ ॥ ೧೫ ॥

ತೇನೈವಾವೇದಕತ್ವಂ ಚೇದಧ್ವರಸ್ಯ ಕಥಂ ನ ತತ್ ।
ಅಧುನಾ ಬಾಧವೈಧುರ್ಯಾದ್ವ್ಯಾವಹಾರಿಕಮಾನತಾ ॥ ೧೬ ॥

ಸಮೋಭಯತ್ರ ಕೇಷಾಂಚಿನ್ಮತೇ ಬಾಧೋಽತ್ರ ತತ್ರ ಚ ।
ವೇದಾಪ್ರಾಮಾಣ್ಯಶಂಸಿತ್ವಾದಶಿಷ್ಟೌ ತಾವುಭಾವಪಿ ॥ ೧೭ ॥

ವ್ಯಾವಹಾರಿಕಮಾನತ್ವಂ ಮೂಢಾಪ್ರಾಮಾಣ್ಯಮೇವ ಹಿ ।
ಅತಪ್ತಧಾರಣಂ ಚೇತ್ಸ್ಯಾತ್ತನ್ಮೂಲೇನೈತದಾಗತಮ್ ॥ ೧೮ ॥

ಸದಾ ತದುಕ್ತಲಾಭಾರ್ಥಮಿದಂ ಪ್ರಾಜ್ಞೈರ್ಹಿರಣ್ಮಯೀ ।
ಪವಿತ್ರಮುದ್ರೇವ ಕುಶಶ್ರುತಿಮೂಲಾ ಪ್ರಧಾರ್ಯತೇ ॥ ೧೯ ॥

ಕಿಮಗ್ನಿನಾಽಪರಾದ್ಧಂ ತೇ ಕಿಂ ಚಕ್ರೇಣ ಮುರದ್ವಿಷಃ ।
ಕಿಂ ವಾ ಸದ್ಭಿರನಿರ್ಭೀತೈಃ ಕಿಂ ಪುರಾಣೈಸ್ತ್ರಯೀಗಿರಾ ॥ ೨೦ ॥

ನಿಷೇಧವಾಕ್ಯಾದ್ಭೀತಿಸ್ತು ತಪ್ತಾತಪ್ತಾಂಕಯೋಃ ಸಮಾ ।
ತತ್ಸರ್ವಂ ತಪ್ತಗಂ ಕುರ್ವನ್ ಸಮಃ ಸ್ವಾರ್ಥಪರಾರ್ಥಯೋಃ ॥ ೨೧ ॥

ಅಮಂತ್ರಾಹೋಮಮೂಲಾಂಕವಿಷಯಂ ಕುರು ಲಾಘವಾತ್ ।
ಸದಾಚಾರವಿರುದ್ಧೋಽರ್ಥಃ ಸ್ವಸಾರಂ ಚಾಧಿರೋಹತಿ ॥ ೨೨ ॥

ಇತ್ಯಾದೌ ತ್ಯಜ್ಯತೇ ವೇದೇ ಕಿಂ ಪುನಃ ಸ್ಮೃತಿಕೋಣಗಃ ।
ಯದಿ ಸ್ಮೃತಿಮನಾದೃತ್ಯ ಶ್ರುತಾವನುದಿತತ್ವತಃ ॥ ೨೩ ॥

ಕಥಂ ನ ಮಾನಯಸ್ಯೇನಂ ನಿಷೇಧಃ ಕೇನ ಮಾನ್ಯತೇ ।
ನಹಿ ಶ್ರುತಿಸತೀ ಧರ್ಮಮಿಮಂ ಕ್ವಾಪಿ ನಿಷೇಧತಿ ॥ ೨೪ ॥

ಸುದರ್ಶನಕೃತೋದ್ಯೋಗನಿಷ್ಕಂಟಕಿತಪದ್ಧತಿಃ ।
ತೂಷ್ಣೀಂ ಸ್ಥಿತೇಽಪಿ ಲೋಕೇಽಸ್ಮಿನ್ನಂಗೀಕಾರ ಇತೀರ್ಯತೇ ॥ ೨೫ ॥

ಶಾಸ್ತ್ರೇಽಪ್ಯಪ್ರತಿಷಿದ್ಧಂ ಚೇದ್ಧೀಯತೇಽನುಮತಂ ತ್ವಿತಿ ।
ಯದಿ ಸ್ಮೃತ್ಯುಕ್ತಮಾಚಾರಮಶ್ರೌತಂ ಮನ್ಯತೇ ಭವಾನ್ ॥ ೨೬ ॥

ಶೌಚಾದೌ ದಿಗ್ವಿಭಾಗಂ ಚ ವೈಚಿತ್ರ್ಯಂ ಮೃತ್ತಿಕಾಗ್ರಹೇ ।
ಯೋಗ್ಯಾಯೋಗ್ಯದಿನತ್ವಂ ಚ ದಂತಧಾವನಕರ್ಮಣಿ ॥ ೨೭ ॥

ಕಾಷ್ಠೇ ಗ್ರಾಹ್ಯಾಗ್ರಾಹ್ಯತಾಂ ಚ ತಥಾಽಽಚಮನಪದ್ಧತಿಮ್ ।
ಗೃಹ್ಯೋಕ್ತಂ ಪಾರ್ವಣವಿಧಿಂ ಭೋಜ್ಯಾಭೋಜ್ಯಪದಾರ್ಥತಾಮ್ ॥ ೨೮ ॥

ಕ್ರಮಂ ಷೋಡಶಸಂಸ್ಕಾರೇ ಶ್ರಾದ್ಧಾದೀನಾಂ ದಿನಾನ್ಯಪಿ ।
ತರ್ಹಿ ತ್ಯಕ್ತ್ವಾ ವ್ರಾತ್ಯದಶಾಮಾಶ್ರಯ ತ್ವವಿಶಂಕಿತಃ ॥ ೨೯ ॥

ಸರ್ವಧರ್ಮಾನ್ ಪರಿತ್ಯಜ್ಯೇತ್ಯಾದಿವಾಕ್ಯಮುಪಾಶ್ರಿತಃ ।
ನಾರದೀಯೇ ಬೃಹತಿ ತೇ ಬಲಂ ವಾಕ್ಯಚತುಷ್ಟಯಮ್ ॥ ೩೦ ॥

ಪಾದ್ಮಗಾರುಡಮುಖ್ಯೇಷು ಸಂತ್ಯಸ್ಮಾಕಂ ಸಹಸ್ರಶಃ ।
ದ್ವೈಧೇ ಬಹೂನಾಂ ವಚನಮಿತಿ ನ್ಯಾಯೇನ ತತ್ತ್ಯಜನ್ ॥ ೩೧ ॥

ಅಂಗೀಕುರು ಹರೇಶ್ಚಕ್ರಧೃತಿಂ ಮುಕ್ತಿಸೃತಿಂ ಪರಾಮ್ ।
ಅಷ್ಟಾದಶಪುರಾಣಸ್ಥಾನ್ಯಸ್ಮದ್ವಾಕ್ಯಾನಿ ಸರ್ವಶಃ ॥ ೩೨ ॥

ಮುಖ್ಯಾನ್ಯುಪಪುರಾಣಸ್ಥವಾಕ್ಯೇಭ್ಯೋ ನಹಿ ಬಿಭ್ಯತಿ
ಪಂಚರಾತ್ರಸ್ಯ ವಿಷ್ಣೂಕ್ತೇಃ ಸರ್ವೈಃ ಪ್ರಾಮಾಣ್ಯಮಿಷ್ಯತೇ ॥ ೩೩ ॥

ಪ್ರತಿಷ್ಠಾಪರ್ವಪೂಜಾದ್ಯಾ ದೇವಾನಾಂ ಸ್ಯುಃ ಕಥಂ ನ ಚೇತ್ ।
ಶ್ರುತಿಪ್ರತೀಕಂ ಸಂಗೃಹ್ಯ ಪವಿತ್ರಾಖ್ಯಾಂ ಪ್ರದಾಯ ಚ ॥ ೩೪ ॥

ತತ್ರ ಪ್ರಥಮಸಂಸ್ಕಾರಸ್ತಪ್ತಚಕ್ರಾಂಕ ಈರ್ಯತೇ ।
ತದ್ವಿರುದ್ಧಮೃಷಿಪ್ರೋಕ್ತಂ ದುರುಕ್ತಮಿತಿ ಗೃಹ್ಯತೇ ॥ ೩೫ ॥

ಉಭಯೋಃ ಕಲಹೇ ಸಾಕ್ಷೀ ವಿಜಾತೀಯೋ ಹಿ ಮಾನ್ಯತೇ ।
ಯಚ್ಛಾಸ್ತ್ರಂ ಲಿಂಗಪಾರಮ್ಯಂ ಪರಂ ದೇವಮುಮಾಪತಿಮ್ ॥ ೩೬ ॥

ತಮಃಪ್ರವರ್ತಕಂ ವಕ್ತಿ ತಾಮಸಂ ತತ್ಪ್ರಚಕ್ಷತೇ ।
ಇತಿ ಗಾರುಡವಾಕ್ಯೇನ ತಥಾ ಪಾದ್ಮಗತೇನ ಚ ॥ ೩೭ ॥

ವಿಷ್ಣ್ವಾಧಿಕ್ಯವಿರೋಧಿತ್ವೇ ಪುರಾಣಸ್ಮೃತಿವಿದ್ಯಯೋಃ ।
ಅಪಿ ತಾಮಸತೈವೋಕ್ತಾ ತತೋಽಪ್ಯನ್ಯದುಪೇಕ್ಷತಾಮ್ ॥ ೩೮ ॥

ನಹಿ ತಾಮಸಮಾಶ್ರಿತ್ಯ ತಮಃ ಪ್ರಾಪ್ತುಂ ತ್ವಮರ್ಹಸಿ ।
ಶ್ರೀಮದ್ಭಾಗವತಂ ಸರ್ವೈಃ ಪೂರ್ವೈರ್ನೋ ಭವತಾಮಪಿ ॥ ೩೯ ॥

ಪುರಾಣೇಷೂತ್ತಮತ್ವೇನ ಶ್ರುತಂ ಮತಮುಪಾಶ್ರಿತಮ್ ।
ತತ್ರಾಪಿ ವಿಷ್ಣುಮಾಹಾತ್ಮ್ಯರಸಾಯನವಿರೋಧಿನಾಮ್ ॥ ೪೦ ॥

ಶೈವೋಕ್ತಿವಿಷಬಿಂದೂನಾಂ ತಾಮಸತ್ವಮುದಾಹೃತಮ್ ।
[1]ವಾಚಂ ಹೀನಾಂ ಮಯಾ ರಕ್ಷನ್ ದುಃಖದುಃಖೀ ಭವೇದಿತಿ ॥ ೪೧ ॥

ಶೃಣ್ವಂತಿ ಯೇಽನ್ಯವಿಷಯಾಃ ಕುಕಥಾ ಮತಿನಾಶಿನೀಃ ।
ತೇ ತಮಃ ಪ್ರಾಪ್ನುವಂತೀತಿ ವಂಧ್ಯಾಂ ನ ಬಿಭೃಯಾದ್ಗಿರಮ್[2] ॥ ೪೨ ॥

ಇತ್ಯಾದೌ ತೇನ ಚೋಕ್ತಂ ನಃ ಸರ್ವಂ ಚಾರ್ವೇವ ಗಮ್ಯತೇ ।
ಮಲ್ಲಕ್ಷಣಮಿಮಂ ಕಾಯಂ ಕೃತ್ವಾ ಮದ್ಧರ್ಮಮಾಶ್ರಿತಃ ॥ ೪೩ ॥

ಸ್ವಲಿಂಗಧಾರಣೇನೇತಿ ತತ್ರೋಕ್ತಂ ಚಕ್ರಲಾಂಛನಮ್ ।
ಶ್ರುತಿತಾತ್ಪರ್ಯಸಿದ್ಧ್ಯರ್ಥೇ ವಿರೋಧಂ ಕುರ್ವತೀ ಸ್ಮೃತಿಃ ॥ ೪೪ ॥

ವಿರೋಧೇ ತ್ವನಪೇಕ್ಷಂ ಸ್ಯಾದಿತ್ಯಮಾನತ್ವಮೇಷ್ಯತಿ ।
ಪವಿತ್ರಂ ತ ಇತಿ ಹ್ಯೇಕಾ ಗೋವಿಂದುರ್ಬಿಭ್ರದಾಯುಧಮ್ ॥ ೪೫ ॥

ಯೇನ ದೇವಾಃ ಪವಿತ್ರೇಣ ಆತ್ಮಾನಂ ಪುನತೇ ಸದಾ ।
ತೇನ ಸಹಸ್ರಧಾರೇಣ ಪಾವಮಾನ್ಯಃ ಪುನಂತು ಮಾಮ್ ॥ ೪೬ ॥

ಇತ್ಯಾದ್ಯೃಚಿ ಯಜುರ್ವೇದೇ ಲೋಕಸ್ಯ ದ್ವಾರಮಿತ್ಯಪಿ ।
ಚರಣಂ ಪೂತಮಿತಿ ಚ ತಥಾ ಸಾಮ್ನಿ ಸ್ಫುಟಂ ವಚಃ ॥ ೪೭ ॥

ನೇಮಿನಾ ತಪ್ತಸುತನುಃ ಸಾಯುಜ್ಯಂ ಪ್ರಾಪ್ನುಯಾದಿತಿ ।
ಉರುಕ್ರಮಾಂಕೈಃ ಸುಭಗಾ ವಯಮೇಭಿರಿಹಾಂಕಿತಾಃ ॥ ೪೮ ॥

ಇತ್ಯಥರ್ವಗತಂ ವಾಕ್ಯಂ ತಥಾ ಶ್ರುತಿಶಿರಸ್ಯಪಿ ।
ಅದ್ಯಾಪಿ ಗೌರ್ಜರೈರ್ವಿಪ್ರೈಃ ಪಠ್ಯಮಾನೇ ಗುರೋರ್ಮುಖಾತ್ ॥ ೪೯ ॥

ಧೃತೋರ್ಧ್ವಪುಂಡ್ರಃ ಶ್ರಿತಸಚ್ಚಕ್ರಧಾರೀ ಹರಿಂ ಪರಮ್ ।
ಯೋ ಧ್ಯಾಯೇತ್ಸ ಮಹಾತ್ಮೇತಿ ಸ್ಪಷ್ಟಮರ್ಥಾಂತರೋಜ್ಝಿತಮ್ ॥ ೫೦ ॥

ಸಂತಿ ಸ್ಮೃತೀತಿಹಾಸಾದ್ಯಾಃ ಪುರಾಣಾನಿ ಚ ಕೋಟಿಶಃ ।
ಸುದರ್ಶನಸ್ಯ ಮೀಮಾಂಸಾ ಕೃತಾ ಹ್ಯಸ್ಮತ್ಪುರಾತನೈಃ ॥ ೫೧ ॥

ತತ್ರೋದ್ಧೃತೇಷು ವಾಕ್ಯೇಷು ಕಥಮೇತೇಷು ಸಂಶಯಃ ।
ಯದಿ ವಾಕ್ಯಂ ಸ್ವಯಂ ಕೃತ್ವಾ ಪ್ರಾವಕ್ಷ್ಯನ್ ಪೂರ್ವಸೂರಯಃ ॥ ೫೨ ॥

---

1 ಗಾಂ ದುಗ್ಧದೋಹಾಮಸತೀಂ ಚ ಭಾರ್ಯಾಂ ದೇಹಂ ಪರಾಧೀನಮಸತ್ಪ್ರಜಾಂ ಚ ।
ವಿತ್ತಂ ತ್ವತೀರ್ಥೀಕೃತಮಂಗವಾಚಂ ಹೀನಾಂ ಮಯಾ ರಕ್ಷತಿ ದುಃಖದುಃಖೀ ॥

2 ಯಸ್ಯಾಂ ನ ಮೇ ಪಾವನಮಂಗ ಕರ್ಮ ಸ್ಥಿತ್ಯುದ್ಭವಪ್ರಾಣನಿರೋಧಮಸ್ಯ ।
ಲೀಲಾವತಾರೇಪ್ಸಿತಜನ್ಮ ವಾ ಸ್ಯಾದ್ವಂಧ್ಯಾಂ ಗಿರಂ ತಾಂ ಬಿಭೃಯಾನ್ನ ಧೀರಃ ॥
—ಶ್ರೀಮದ್ಭಾಗವತ (xl/11/19,20)

ತರ್ಹ್ಯರ್ಚ್ಯನೇಕಭೇದಾಯಾಂ ಕುತೋ ವಾಕ್ಯಂ ನಿಜೇಚ್ಛಯಾ ।
ವ್ಯಾಕರಿಷ್ಯನ್ನತಿಸ್ಪಷ್ಟಮನರ್ಥಾಂತರಸಂಭವಮ್ ॥ ೫೩ ॥

ಪ್ರಾವರ್ತಂತ ಕಥಂ ಪೂರ್ವೇ ಸರ್ವೇಽಪ್ಯಾಸ್ತಿಕಮೌಲಯಃ ।
ಸೃಷ್ಟೈರ್ವಾಕ್ಯೈರ್ನ ಚೇತ್ ಸರ್ವವಿಪ್ಲವಃ ಸ್ಯಾಜ್ಜಿನೋಕ್ತಿತಃ ॥ ೫೪ ॥

ಸ ವಕ್ತಿ ಸರ್ವಮಾಮ್ನಾಯಂ ರಕ್ಷಸಾ ಕೇನಚಿತ್ ಕೃತಮ್ ।
ಪವಿತ್ರಂ ಚರಣಂ ಚಕ್ರಂ ಲೋಕದ್ವಾರಂ ಸುದರ್ಶನಮ್ ॥ ೫೫ ॥

ಪರ್ಯಾಯವಾಚಕಾ ಹ್ಯೇತೇ ಚಕ್ರಸ್ಯ ಪರಮಾತ್ಮನಃ ।
ಪುರಾಣೋಕ್ತಿರಿಯಂ ಚಕ್ರಂ ಪವಿತ್ರಾದ್ಯಾಖ್ಯಯಾಽಹ ಹಿ ॥ ೫೬ ॥

ಮರ್ತ್ಯಾನುಶಾಸನಂ ಗ್ರಾಹ್ಯಂ ಕಿಂ ಪುನಃ ಸ್ಮಾರ್ತಶಾಸನಮ್ ।
ಪವಿತ್ರಯತೇ ಲೋಕಾನಿತಿ ವ್ಯುತ್ಪತ್ತಿಸಂಭವಾತ್ ॥ ೫೭ ॥

ಯೋಗರೂಢಿಬಲಾಯಾತಾ ಪವಿತ್ರಾಖ್ಯಾ ಸುದರ್ಶನೇ ।
ಇಮಾಂ ಶ್ರುತಿಮುಪಾದಾಯ ಪುರಾಣಾನ್ಯೇವ ಸರ್ವಶಃ ॥ ೫೮ ॥

ಪ್ರಮಾಣಯಂತಿ ಸ್ವೋಕ್ತೇಽಸ್ಮಿಂಸ್ತಪ್ತಚಕ್ರಾಂಕಧಾರಣೇ ।
ಅತೋಽನ್ಯಾರ್ಥಃ ಶ್ರುತೇರಸ್ಯಾಃ ಕಥಂ ಶಕ್ಯೋ ಮನೀಷಿಭಿಃ ॥ ೫೯ ॥

ಸತಿ ನೇತರಿ ಮಾರ್ಗಸ್ಯ ಕಿಮಂಧೋಕ್ತಃ ಕ್ರಮೋ ಭವೇತ್ ।
ಪವಿತ್ರಪದನಿರ್ದಿಷ್ಟಮರ್ಥಂ ವೇದಸ್ತಮೇವ ಹಿ ॥ ೬೦ ॥

ಸಹಸ್ರಧಾರಸಾಮೋಕ್ತ್ಯಾ ಚಕ್ರತ್ವಂ ಸ್ಪಷ್ಟಯತ್ಯಹೋ ।
ಷಟ್ಕೋಣತ್ವಾಭಿಧಾಂ ಚಕ್ರಚ್ಛಾಯಾಮುದ್ಯಾಪ್ಯುಪಾದದತ್ ॥ ೬೧ ॥

ಕುಶಗ್ರಂಥಿರಪಿ ಹ್ಯಾಸೀತ್ಪವಿತ್ರಾಖ್ಯೋ ಮಹೀತಲೇ ।
ಯಥಾ ಚಿತ್ರಸ್ಥಸಿಂಹಸ್ಯ ಸಿಂಹಸಾದೃಶ್ಯಮಾತ್ರತಃ ॥ ೬೨ ॥

ಸಿಂಹತಾಯಾಂ ಮುಖ್ಯಸಿಂಹೋ ವನ್ಯ ಏವೇತಿ ನಿರ್ಣಯಃ ।
ತಥಾ ಪವಿತ್ರನಾಮ್ನೈತಚ್ಚಕ್ರಸ್ಯೈವೇತಿ ಗಮ್ಯತೇ ॥ ೬೩ ॥

ಷಟ್ಕೋಣತಾ ಸರ್ವಮತೇ ಚಕ್ರಸ್ಯೈವ ಹಿ ಲಕ್ಷಣಮ್ ।
ಆಗಮೋಕ್ತಂ ಪವಿತ್ರಂ ಚ ಷಟ್ಕೋಣಗ್ರಂಥಿತೋಽಭವತ್ ॥ ೬೪ ॥

ಅತೋಽನ್ಯಾರ್ಥಕಥಾ ವಾತಾಹತಾ ಶುಷ್ಕಲತಾಽಭವತ್ ।
ತತ್ಪವಿತ್ರಮಿದಂ ವ್ಯಾಪ್ತಂ ಯತ್ತ್ವಂ ಪರ್ಯೇಷಿ ವಿಶ್ವತಃ ॥ ೬೫ ॥

ಇತಿ ಶ್ರುತ್ಯುದಿತಂ ವಿಷ್ಣುವ್ಯಾಪ್ತ್ಯಾ ವ್ಯಾಪ್ತತ್ವಮೇವ ಚ ।
ಚಕ್ರಸ್ಯೈವೋಚಿತಂ ವಿಪ್ರಕುಶಸ್ಯಾತ್ಯಂತಬಾಧಿತಮ್ ॥ ೬೬ ॥

ಸುದರ್ಶನಸ್ತುತಿಃ

ತ್ವಮಗ್ನಿರ್ಭಗವಾನ್ ಸೂರ್ಯಸ್ತ್ವಂ ಸೋಮೋ ಜ್ಯೋತಿಷಾಂ ಪತಿಃ ।
ತ್ವಮಾಪಸ್ತ್ವಂ ಕ್ಷಿತಿರ್ವ್ಯೋಮ ವಾಯುರ್ಮಾತ್ರೇಂದ್ರಿಯಾಣಿ ಚ ॥ ೧ ॥

ಸುದರ್ಶನ ನಮಸ್ತುಭ್ಯಂ ಸಹಸ್ರಾರಾಚ್ಯುತಪ್ರಿಯ ।
ಸರ್ವಾಸ್ತ್ರಘಾತಿನ್ ವಿಪ್ರಾಯ ಸ್ವಸ್ತಿ ಭೂಯಾದಿಡಸ್ಪತೇ ॥ ೨ ॥

ತ್ವಂ ಧರ್ಮಸ್ತ್ವಂ ಧೃತಿಃ ಸತ್ಯಂ ತ್ವಂ ಯಜ್ಞೋಽಖಿಲಯಜ್ಞಭುಕ್ ।
ತ್ವಂ ಲೋಕಪಾಲಃ ಸರ್ವಾತ್ಮಾ ತ್ವಂ ತೇಜಃ ಪೌರುಷಂ ಪರಂ ॥ ೩ ॥

ನಮಃ ಸುನಾಭಾಖಿಲಧರ್ಮಸೇತವೇ
ಹ್ಯಧರ್ಮಶೀಲಾಸುರಧೂಮಕೇತವೇ ।
ತ್ರೈಲೋಕ್ಯಗೋಪಾಯ ವಿಶುದ್ಧವರ್ಚಸೇ
ಮನೋಜವಾಯಾದ್ಭುತಕರ್ಮಣೇ ಗೃಣೇ ॥ ೪ ॥

ತ್ವತ್ತೇಜಸಾ ಧರ್ಮಮಯೇನ ಸಂಹೃತಂ
ತಮಃ ಪ್ರಕಾಶಶ್ಚ ದೃಶೋರ್ಮಹಾತ್ಮನಾಂ ।
ದುರತ್ಯಯಸ್ತೇ ಮಹಿಮಾ ಗಿರಾಂ ಪತೇ
ತ್ವದ್ರೂಪಮೇತತ್ಸದಸತ್ಪರಾವರಮ್ ॥ ೫ ॥

ಯದಾ ವಿಸೃಷ್ಟಸ್ತ್ವಮನಂಜನೇನ ವೈ
ಬಲಂ ಪ್ರವಿಷ್ಟೋಽಜಿತ ದೈತ್ಯದಾನವಮ್ ।
ಬಾಹೂದರೋರ್ವಂಘ್ರಿಶಿರೋಧರಾಣಿ
ವೃಕ್ಣನ್ನಜಸ್ರಂ ಪ್ರಧನೇ ವಿರಾಜಸೇ ॥ ೬ ॥

ಸ ತ್ವಂ ಜಗತ್ತ್ರಾಣ ಖಲಪ್ರಹಾಣಯೇ
ನಿರೂಪಿತಃ ಸರ್ವಸಹೋ ಗದಾಭೃತಾ ।
ವಿಪ್ರಾಯ ವಾಽಸ್ಮತ್ಕುಲದೈವಹೇತವೇ
ವಿಧೇಹಿ ಭದ್ರಂ ತದನುಗ್ರಹೋ ಹಿ ನಃ ॥ ೭ ॥

ಯದ್ಯಸ್ತಿ ದತ್ತಮಿಷ್ಟಂ ವಾ ಸ್ವಧರ್ಮೋ ವಾ ಸ್ವನುಷ್ಠಿತಃ ।
ಕುಲಂ ನೋ ವಿಪ್ರದೈವಂ ಚೇದ್ದ್ವಿಜೋ ಭವತು ವಿಜ್ವರಃ ॥
ಯದಿ ಮೇ ಭಗವಾನ್ ಪ್ರೀತಃ ಏಕಃ ಸರ್ವಗುಣಾಶ್ರಯಃ ।
ಸರ್ವಭೂತಾತ್ಮಭಾವೇನ ದ್ವಿಜೋ ಭವತು ವಿಜ್ವರಃ ॥

॥ ಇತಿ ಶ್ರೀ ಅಂಬರೀಷಕೃತಾ ಸುದರ್ಶನಸ್ತುತಿಃ (ಭಾಗವತ IX 5) ॥